ಶ್ರೀ ಕೆ. ಕುಶಾಲ:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕ್ಷತ್ರಿಯ ಮರಾಠ ಜನಾಂಗವನ್ನು ಹಿಂದುಳಿದ ಪಂಗಡಕ್ಕೆ ಸೇರಿಸುವ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಮುಖ್ಯ ಮಂತ್ರಿಗಳ ವಿರುದ್ಧ ಹಕ್ಕುಚ್ಯುತಿ ನಿರ್ಣಯ

† ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ನಮ್ಮ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 190 ಮತ್ತು 191ರ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಹಕ್ಕುಚ್ಯುತಿ ಪ್ರಶ್ನೆಯನ್ನು ತಮ್ಮ ಅವಗಾಹನೆಗಾಗಿ ಕಳುಹಿಸಿದ್ದೇನೆ. ಆ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನಾನು ತಮ್ಮ ಅನುಮತಿಯನ್ನು ಕೋರುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ, ತಮ್ಮ ಬೇಡಿಕೆಯ ಬಗ್ಗೆ ಉತ್ತರಿಸುತ್ತಾ " ರಾಜ್ಯದಲ್ಲಿ ಹಿಂದಿನ ಜನತಾ ಮತ್ತು ಜನತಾದಳದ ಸದಸ್ಯರು ಅಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ ಲಕ್ಷಾವಧಿ ರೂಪಾಯಿ ಗಳಿಸಿ ಏನೋ ಒಂದು ರೀತಿಯಲ್ಲಿ ಬೆಳೆದುಕೊಂಡು ಬಂದಂಥ ಅನೇಕ ಜನ ಆವಾಗಿನ ಶಾಸಕರು ಇವತ್ತು ಬಹಳ ಕಡಿಮೆ ಇಲ್ಲಿ ಕಾಣಿಸುತ್ತಿದ್ದಾರೆ. ಜನ ಅವರಿಗೆ ಪಾಠ ಕಲಿಸಿದ್ದಾರೆ. ಮುಂದುವರಿದು ನಾನು ಎವೆರ್ರಿ ಲೆಜಿಸ್ಲೇಟರ್ ಎಂದು ಹೇಳಲಿಲ್ಲ. ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಒಂದು ಉದ್ಯೋಗ ಮಾಡಿಕೊಂಡಿದ್ದರು ಎಂದು ಇನ್ನೂ ಮುಂತಾಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇನ್ನು ಅಂದಿನ ಜನತಾ ಮತ್ತು ಜನತಾ ದಳದ ಸದಸ್ಯರ ಬಗ್ಗೆ ವ್ಯಕ್ತಮಾಡಿದ ಅಭಿಪ್ರಾಯ ಆ ಒಂದು ಉತ್ತರದ ಸಮಯದಲ್ಲಿ ಹೇಳಿದ್ದಾರೆ, ಅದು ಹಕ್ಕುಚ್ಯುತಿಯಾಗಿರುತ್ತದೆ. ಅಂಥ ಒಂದು ಆರೋಪದಿಂದ ಅದರ ಬಗ್ಗೆ ನನಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ನೀಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕೂಡಾ ನಿನ್ನೆ ದಿವಸ ನಾನು ಮತ್ತು ಏಕಾಂತಯ್ಯನವರು ಬರೆದಿರತಕ್ಕಂಥ ಪತ್ರವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ವಿಚಾರವನ್ನು ನಿನ್ನೆಯೇ ಪ್ರಸ್ತಾಪ ಮಾಡಿದೆ. ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. "ಲಕ್ಷಾವಧಿ ರೂಪಾಯಿ ಹಣವನ್ನು ಗಳಿಸಿ" ಎನ್ನತಕ್ಕಂಥ ಪದವೆನ್ನು ತಾವು ದಯವಿಟ್ಟು ಓದಬೇಕು. ಇಲ್ಲಿ ಜನತಾ ಮತ್ತು ಜನತಾದಳದ ಸದಸ್ಯರಾಗಿರತಕ್ಕಂಥವರು ಏನಾದರು ಗಳಿಸಿದ್ದರೆ ಅಲ್ಲಿ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ಎಲ್ಲ ಸದಸ್ಯರ ಬಗ್ಗೆ ಹೇಳುತ್ತಿಲ್ಲ ಎನ್ನತಕ್ಕಂಥ ಮಾತನ್ನು ಕೂಡಾ ಹೇಳಿದ್ದಾರೆ. ಅದನ್ನು ಒಪ್ಪಿಕೊಂಡರೂ ಸಹಾ ಗಳಿಸಿರತಕ್ಕಂಥವರು ಕೆಲವರು ಇದ್ದಾರೆ. ಇದು ಸಾರಾಸಗಟಾಗಿ ಎಲ್ಲರ ಮೇಲೆ ಕೂಡ ಹೇಳಿದ್ದರೂ, ಲಕ್ಷಾವಧಿ ರೂಪಾಯಿ ಗಳಿಸಿರತಕ್ಕವರು ಕೆಲವರಿದ್ದಾರೆ ಎನ್ನುವುದಾದರೆ ಇದರ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ಅವರ ಹತ್ತಿರ ಏನಾದರೂ ದಾಖಲೆ ಇದ್ದರೆ ಹೇಳಲಿ. ಇಂತಹ ಸದಸ್ಯರು ಇಷ್ಟು ಲಕ್ಷ ರೂಪಾಯಿ ಮಾಡಿದ್ದಾರೆ ಎಂದು ಹೇಳಲಿ. ಇದರ ಬಗ್ಗೆ ವಿಚಾರಣೆಗೆ ನಾವು ಕೂಡ ತಯಾರು ಇದ್ದೇವೆ. ಅದು ಏನೂ ಇಲ್ಲದೇ ವೃಥಾ ಆರೋಪ ಮಾಡಿದ್ದಾರೆ. ಲಕ್ಷಾಂತರ ರೂಪಾಯಿ ಗಳಿಸಿ ಎಂಬ ಪದ ಸ್ಪೆಸಿಫಿಕ್ ಆಗಿದೆ; ಮತ್ತು ಕರಾರುವಕ್ಕಾದ ಪದ ಹೇಳಿದ್ದಾರೆ. ತಾವು ಯಾವ ಡಿಕ್ಷನರಿ ತರಿಸಿ ಬೇಕಾದರೂ ನೋಡಿದರೂ ಸಹ ಇದು ಎಷ್ಟು ಸ್ಪಷ್ಟವಾಗಿದೆ ಎನ್ನತಕ್ಕದ್ದು ಅರ್ಥ ಆಗುತ್ತದೆ. ಇದರಿಂದ ನಮ್ಮ ಹಕ್ಕುಚ್ಯುತಿ ಆಗಿದೆ. ನಾನು ಕೂಡ ಅಂದು ಒಬ್ಬ ಜನತಾ ಪಕ್ಷದ ಸದಸ್ಯನಾಗಿ ಇದ್ದೆ. ಇಂದಿಗೂ ಸಹ ಇದ್ದೇನೆ. ನನ್ನ ಕಾಲದ ಅವಧಿಯಲ್ಲಿ ನಾನು ನಾಲ್ಕನೇ

ಸಾರಿ ಈ ಸದನದಲ್ಲಿ ಪ್ರವೇಶ ಪಡೆಯುತ್ತಿದ್ದೇನೆ. ಯಾವತ್ತೂ ಕೂಡ ಈ ತರಹ ಅಪಾದನೆಯನ್ನು ಅಪವಾದವನ್ನು ಈ ಸದನದಲ್ಲಿ ಹೊತ್ತುಕೊಂಡು ಕೆಲಸ ಮಾಡಲು ಕಷ್ಟ ಆಗುತ್ತದೆ. ನಮ್ಮ ಕ್ಷೇತ್ರದಲ್ಲಿ ಜನ ನನ್ನನ್ನು ಕೇಳುತ್ತಾರೆ. ನೀನು ಎಷ್ಟು ಲಕ್ಷ ಮಾಡಿದ್ದೀಯಾ ಎಂದು? ಯಾವುದರಲ್ಲಿ ಮಾಡಿದ್ದೀಯಾ ಎಂದು ಕೇಳತಕ್ಕ ಹಕ್ಕು ನಮ್ಮ ಕ್ಷೇತ್ರದ ಮತದಾರರಿಗೆ ಕೂಡ ಇದೆ. ನಾವು ಇವ್ಹೊತ್ತಿನ ದಿವಸ ಅವರ ಮುಂದೆ ಏನು ಉತ್ತರ ಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಬಗ್ಗೆ ಹೇಳಿರುವಾಗ, ನಿಮ್ಮ ಮೇಲೆ ಸಂಶಯ ಇದೆ. ಗುಮಾನಿ ಇದೆ ಎಂದು ಅವರು ಕೇಳಿದರೆ ಏನು ಉತ್ತರ ಹೇಳಬೇಕಾಗುತ್ತದೆ. ಮತದಾರರ ಮುಂದೆ ನಾವು ತಲೆತಗ್ಗಿಸತಕ್ಕಂಥ ಒಂದು ಪರಿಸ್ಥಿತಿ ನನಗಂತೂ ಕೂಡ ಉಂಟಾಗಿದೆ. ಆದ್ದರಿಂದ ದಯವಿಟ್ಟು ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳಿಸಿ. ವೈಯುಕ್ತಿಕವಾಗಿ ಕೂಡ ನನ್ನ ಹಕ್ಕುಚ್ಯುತಿ ಆಗಿದೆ. ಮತ್ತು ಸಾರ್ವತ್ರಿಕವಾಗಿ ಜನತಾ ಮತ್ತು ಜನತಾದಳದ ಸದಸ್ಯರ ಹಕ್ಕುಚ್ಯುತಿ ಆಗಿದೆ. ತಾವು ಹಕ್ಕುಚ್ಯುತಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅಥವಾ ಹಕ್ಕುಚ್ಯುತಿ ಸಮಿತಿಗೆ ಕಳಿಸಲು ತಾವು ಆಪ್ಪಣೆ ಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:- ನಿಯಮ 191ರ ಪ್ರಕಾರ ತಾವು ಅನುಮತಿ ನೀಡಿದರೆ 193ರ ಪ್ರಕಾರ ನನಗೆ ಹೇಳಿಕೆ ನೀಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಏಕಾಂತಯ್ಯನವರು ಹಕ್ಕುಚ್ಯುತಿ ಸೂಚನೆ ನನಗೆ ಬಂದಿದೆ. ಸನ್ಮಾನ್ಯ ಸದಸ್ಯರು 190 ಮತ್ತು 191ರ ಪ್ರಕಾರ, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ಪ್ರಕಾರ ಸೂಚನಾ ಪತ್ರವನ್ನು ಕೊಟ್ಟಿದ್ದಾರೆ. ಇದರಲ್ಲಿ ಕೆಲವು ವಿಚಾರಗಳು ಪ್ರೊಸೀಡಿಂಗ್ಸ್‌ನಲ್ಲಿ ಏನು ವಿಚಾರ ವ್ಯಕ್ತ ಆಗಿದೆ ಎಂದು ಹೇಳುತ್ತಾರೆ. ಅದನ್ನು ನೋಡಿದ್ದೇನೆ ಮತ್ತು ಈ ಆಕ್ಚುಯಲ್ ಪ್ರೊಸೀಡಿಂಗ್ಸ್‌ನಲ್ಲಿ ಏನಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:- ಇಲ್ಲಿ ಪ್ರಶ್ನೆ ಏನು ಇದೆ. ಅಂದರೆ 190 ಮತ್ತು 191ರ ನಿಯಮದ ಪ್ರಕಾರ ನೀವು ಅನುಮತಿ ನೀಡಿದರೆ 193ರ ನಿಯಮದ ಪ್ರಕಾರ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೇವೆ. ತದ ನಂತರ ಮಾನ್ಯ ಮಂತ್ರಿಗಳು ಹೇಳಬಹುದು. ನೀವು 190 ಮತ್ತು 191ರ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ತಾವು ಹೇಳುವುದಾದರೆ ತಾವು ಹೇಳಬಹುದು. ಆದರೆ....

SRI M. VEERAPPA MOILY :- I am just putting the records straight. I am only referring to your notice. ನಾನು ಮೆರಿಟ್ ಮೇಲೆ ಹೋಗುತ್ತಿಲ್ಲ. ಈ ಸೂಚನೆಯಲ್ಲಿ ತಾವು "ಸಮ್ ಎಕ್ಸ್‌ಟ್ರಾಕ್ಟ್" ಎಂದು ಹೇಳಿದ್ದೀರಿ. You have given some extracts of the proceedings. Therefore, I am bringing it to the notice of the Hon'ble Speaker and to this House the actual proceedings of this House. If I am permitted I will read out the proceedings.

ಆಡಳಿತದಲ್ಲಿ ಸಿಕ್ಕಾಪಟ್ಟೆ ಜನತಾಪಕ್ಷ ಮತ್ತು ಜನತಾದಳದ ಮುಖಂಡರು, ಪ್ರಮುಖರ, ಪ್ರತಿನಿಧಿಗಳ ಹಸ್ತಕ್ಷೇಪದಿಂದ ಜನತಾ ದಳಕ್ಕೆ ಇಷ್ಟು ಕೆಟ್ಟ ಹೆಸರು ಬಂತು. ಬಹುಶ: ಇಷ್ಟು ಕೆಟ್ಟ ಹೆಸರು ಎರಡನೆಯ ಯಾವುದರಿಂದಲೂ ಬಂದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಜನತಾ ಪಕ್ಷ ಮತ್ತು ಜನತಾ ದಳದ ದೊಡ್ಡ ಸೋಲಿಗೆ ಇದು ಮೆಯಿನ್ ಫ್ಯಾಕ್ಟರ್ ಎನ್ನುವ ಮಾತನ್ನು ಹೇಳುತ್ತೇನೆ. ಆಗ ಪರಿಸ್ಥಿತಿ ಹೇಗಿತ್ತು ಎಂದರೆ, ಸುದ್ದಿಪದಿಂದ, ಇಂತಹ ಜನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ, ಆಡಳಿತದ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ, ಅದರಲ್ಲಿ, ಅನೇಕ ಜನ ಲಕ್ಷಾವಧಿ ರೂಪಾಯಿ ಗಳಿಸಿ, ಏನೋ ಒಂದು ರೀತಿ ಬೆಳೆದುಕೊಂಡು ಬಂದಂತೆ ಅನೇಕ ಜನ ಆವಾಗಿನ ಶಾಸಕರು ಇವತ್ತು ನನಗೆ ಬಹಳ ಕಡಿಮೆ ಕಾಣಿಸುತ್ತಿದ್ದಾರೆ.....

ಶ್ರೀ ಹೆಚ್. ಏಕಾಂತಯ್ಯ:- ಇಲ್ಲಿ ಕಾಣಿಸುತ್ತಿದ್ದಾರೆ ಎಂದು ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಏಕಾಂತಯ್ಯನವರು ಮುಗಿಸಿದ ಮೇಲೆ ನಾನು ಮಾತನಾಡುತ್ತೇನೆ. ಈಗ ನಾನು ಓದುತ್ತಿದ್ದೇನೆ. ತಮಗೇ ಬೇಕಾದರೆ ಕಳಿಸಿಕೊಡುತ್ತೇನೆ. ತಾವೇ ಬೇಕಾದರೆ ಓದಿ. You must have some patience to hear others views. ಈಗ ಹೇಳಿಬಿಡುತ್ತೇನೆ. ಇಲ್ಲದೇ ಹೋದರೆ ತಾವೇ ಓದಿಬಿಡಿ, ಐ ಡೋಂಟ್ ಮೈಂಡ್. ಅವರೇ ಓದುವುದಿದ್ದರೆ ಓದಲಿ, ಅವರಿಗೆ ತಾಳ್ಮೆ ಇಲ್ಲದಿದ್ದರೆ...

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷರು ನನಗೆ ಅನುಮತಿ ನೀಡಿದರೆ ನಾನು ಓದಲಿಕ್ಕೆ ತಯಾರಾಗಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವೇ ಅದನ್ನು ಓದಿ ಮುಗಿಸಿಬಿಡಿ.

ಶ್ರೀ ಹೆಚ್. ಏಕಾಂತಯ್ಯ:- ಅಧ್ಯಕ್ಷರು ಅನುಮತಿ ಕೊಡಲಿ, ಓದುತ್ತೇನೆ.

SRI M.VEERAPPA MOILY :- I am permitted by the Hon'ble Speaker to make some submission. I am correcting to the extent that certain extracts has been made...

SRI H. EKANTHAIAH:- Not even a word is there, which is not in the statement made by the Chief Minister.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಏಕಾಂತಯ್ಯನವರೆ, ತಾವು ಹಿರಿಯ ಸದಸ್ಯರಿದ್ದೀರಿ. ನಾವು ಎದ್ದುನಿಂತಾಗ ಆಗಾಗ ತಾವು ಎದ್ದು ನಿಂತು ಡಿಸ್ಟರ್ಬ್ ಮಾಡಬೇಡಿ. Let us have the views.

"ಬಹುಶಃ ಇಷ್ಟು ಕೆಟ್ಟ ಹೆಸರು ಎರಡನೆಯ ಯಾವುದರಿಂದಲೂ ಬಂದಿಲ್ಲವೆಮದು ತಿಳಿದುಕೊಂಡಿದ್ದೇನೆ. ಮತ್ತು ಜನತಾಪಕ್ಷ ಮತ್ತು ಜನತಾದಳದ ದೊಡ್ಡ ಸೋಲಿಗೆ ಇದು ಮೆಯಿನ್ ಫ್ಯಾಕ್ಟರ್ ಎನ್ನುವ ಮಾತನ್ನು ಹೇಳುತ್ತೇನೆ. ಆಗ ಪರಿಸ್ಥಿತಿ ಹೇಗಿತ್ತು ಎಂದರೆ, ಸುದೈವದಿಂದ, ಇಂತಹ ಜನ ಆಡಳಿತದಲ್ಲಿ ಹಸ್ತಕ್ಷೇಪಮಾಡಿ, ಆಡಳಿತದ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ, ಆದರಲ್ಲಿ ಅನೇಕ ಜನ ಲಕ್ಷಾವಧಿ ರೂಪಾಯಿ ಗಳಿಸಿ, ಏನೋ ಒಂದು ರೀತಿ ಬೆಳೆದುಕೊಂಡು ಬಂದಂಥ ಅನೇಕ ಜನ ಆವಾಗಿನ ಶಾಸಕರು ಇವತ್ತು ನನಗೆ ಬಹಳ ಕಡಿಮೆ ಕಾಣಿಸುತ್ತಿದ್ದಾರೆ. I don't know what it conveys. ಜನ ಅವರಿಗೆ ಪಾಠ ಕಲಿಸಿದ್ದಾರೆ. ಪರಿಸ್ಥಿತಿ ಎಲ್ಲಿವರೆಗೆ ಬರುತ್ತಿತ್ತು ಎಂದರೆ, ಮಂತ್ರಿಗಳ ಹತ್ತಿರ ಮುಖ್ಯ ಮಂತ್ರಿಗಳ ಹತ್ತಿರ ಪುಢಾರಿಗಳು ಬಂದು, ಏನ್ ಸ್ವಾಮಿ ಇವತ್ತು ಈ ಕೆಲಸ ಆಗಬೇಕು, ಸಂಜೆವರೆಗೆ ಆರ್ಡರ್ ಆಗಬೇಕು ಮತ್ತು ಸಂಜೆಯೊಳಗೆ ಆರ್ಡರ್ ತೆಗೆದುಕೊಂಡೇ ಹೋಗುತ್ತಿದ್ದರು. ಒಂದುವೇಳೆ, ಇಲ್ಲ ಇದು ಆಗುವುದಿಲ್ಲ, ಆಗುವುದಕ್ಕೆ ಬಹಳ ಕಷ್ಟವಿದೆ ಎಂದು ಹೇಳಿದರೆ, ನಾವು ಇರುವುದರಿಂದ, ನೀವು ಆ ಕುರ್ಚಿಮೇಲೆ ಕುಳಿತಿದ್ದೀರಿ, ಇಲ್ಲದೇ ಹೋದರೆ ನಾಳೆ ನಿಮ್ಮನ್ನು ಕಿತ್ತು ಬಿಸಾಕಬಹುದು, ದಯಮಾಡಿ ಆರ್ಡರ್ ಮಾಡಿಕೊಡಿ, ಆರ್ಡರ್ ತೆಗೆದುಕೊಂಡು ಹೋಗುವುದಕ್ಕೇ ಬಂದಿದ್ದೇನೆ ಎನ್ನುವಷ್ಟರಮಟ್ಟಿಗೆ, ಆ ವೇಳೆಗೆ ಹಸ್ತಕ್ಷೇಪ ಇತ್ತು. ಬಹುಶಃ ನೀವು ಇದು ಸುಳ್ಳು ಎಂದು ಹೇಳಬಹುದು. ಆದರೆ ಎಲ್ಲರಿಗೂ ಗೊತ್ತಿದೆ, ಎಲ್ಲಿಯವರೆಗೆ ಪರಿಸ್ಥಿತಿ ಬಂದಿತ್ತು, ಎಂದರೆ, every legislator of the Janata Dal and Janata Party was treating his constituency as an empire. No Tahsildar should be appointed without his approval; no Sub-Inspector should be posted without his approval, no Circle Inspector should be posted without his approval, no Medical Officer can go and take charge without his approval, as if it was his empire."

ಎಂದು ಹೇಳಿಕೆ ಇದೆ. ಈ ಸೂಚನೆಯಲ್ಲಿ ಬಹುಶಃ it conveys totally a different matter. ಅವರು ಏನು ಹೇಳಿದ್ದಾರೆಂದರೆ,

"ಜನತಾ – ಜನತಾದಳ ಸದಸ್ಯರು ಅಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತದ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ ಲಕ್ಷಾವಧಿ ರೂಪಾಯಿ ಗಳಿಸಿ ಏನೋ ಒಂದು ರೀತಿಯಲ್ಲಿ ಬೆಳೆದುಕೊಂಡು ಬಂದಂತಹ ಅನೇಕ ಜನ ಅವಾಗಿನ ಶಾಸಕರು ಇವತ್ತು ಬಹಳ ಕಡಿಮೆ ಇಲ್ಲಿ ಕಾಣಿಸುತ್ತಿದ್ದಾರೆ...."

ಎಂದು ಇದೆ. ಬಹುಶಃ ಇದಕ್ಕೂ ಅದಕ್ಕೂ ಬಹಳ ವ್ಯತ್ಯಾಸವಿದೆ. Let me submit it. But the proceedings will have to be reproduced in the notice in a full form, not in a distorted form.

MR. SPEAKER:- It is the corrected version of the proceedings by the member?

SRI M. VEERAPPA MOILY:- That I do not know. It has not been corrected.

MR. SPEAKER:- Has it been sent for all the members to get it corrected?

ಶ್ರೀ ಡಿ.ಬಿ. ಚಂದ್ರೇಗೌಡ:– ಈಗ ಕರೆಕ್ಟೆಡ್ ಕೂಡ ಈ ಸದನದಲ್ಲಿ ಪ್ರಿಂಟಿಂಗ್ ಮಿಸ್ಟೇಕ್ ಎಂತಲೂ ಆಗಿದೆ, ಈ ಸೆಷನ್‌ನಲ್ಲಿಯೇ ಆಗಿದೆ. ಆದುದರಿಂದ ಕರೆಕ್ಟೆಡ್ ಪ್ರಿಂಟಿಂಗ್ ಮಿಸ್ಟೇಕ್‌ಗಿಂತ ಹೆಚ್ಚಾಗಿ ಪತ್ರಿಕೆಗಳಲ್ಲಿ ಇದರ ಬಗ್ಗೆ ಸಾಕಷ್ಟು ವರದಿ ಬಂದು ಬಿಟ್ಟಿದೆ. ಕರೆಕ್ಟೆಡ್ ಅಲ್ಲ ಎಂದು ಪತ್ರಿಕೆಯವರು ವರದಿ ಮಾಡಿದರು. ಅವತ್ತೇ ಕರೆಕ್ಟೆಡ್ ಅಲ್ಲ ಅಂದರೆ ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು ಎನ್ನುವುದು ಬೇರೆ. ಪ್ರತಿಯೊಂದು ಪದವೂ ಪತ್ರಿಕೆಗಳಲ್ಲಿ ವರದಿಯಾಗಿದೆ. It is a reflection on the House and the members. The basic question is that. Even under the practice of procedure at Page 224 it is said. In order to constitute a breach of privilege, however, a libel upon a member of parliament must concern his character or conduct in his capacity as a member of the House and must be based on matters arising in the actual transaction of the business of the House." Here it is a part of the proceedings and it is part and parcel of the business of the House. ಈ ರೀತಿ ನಾನೊಬ್ಬನೆ ಸತ್ಯಹರಿಶ್ಚಂದ್ರ; ಉಳಿದವರೆಲ್ಲಾ ಅಪವಿತ್ರರು ಎಂದು ಹೇಳಿದರೆ ಹೇಗೆ? ಬೈರೇಗೌಡರು ಒಂದು ಮಾತನ್ನು ಹೇಳಿದರು. ಕೆಲವರು ಮಾಡಿದ್ದಾರೆಂದು. ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಯಾರು ಸದನದಲ್ಲಿ ಇಲ್ಲ. ಅಂತಹವರ ಬಗ್ಗೆ ಈ ರೀತಿ ಲಘುವಾಗಿ ಮಾತನಾಡುವುದು ಸರಿಯಲ್ಲ. ಅವರು ಗೌರವಾನ್ವಿತ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ನಾವೂ ಸಹ ಕೆಲಸ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳು ಅಂದ ಮಾತ್ರಕ್ಕೆ he cannot sit over the judgment of each member. I would say that he is first a member and then a Chief Minister or the Leader of the House. He should know his limits also. Therefore, ಇದು ಅಷ್ಟು.

ಅಧ್ಯಕ್ಷರು:– ಅಷ್ಟು ಎಂದರೆ ಎಷ್ಟು?

ಶ್ರೀ ಡಿ.ಬಿ. ಚಂದ್ರೇಗೌಡ:– ಅಷ್ಟು ಅಂದರೆ, ತಾವು ಗಂಭೀರವಾಗಿ ನಗುತ್ತಾ ಕೂತಿದ್ದರೆ ನಮಗೆ ಏನು ಅನ್ನಿಸುತ್ತದೆ? ಏನೂ ಆಗಿಲ್ಲವೇನೋ ಎಂದು ನಮಗೆ ಅನಿಸುತ್ತದೆ.

ಅಧ್ಯಕ್ಷರು:– ತಾವು ಹೇಳಿದ್ದನ್ನು ಚಿತ್ತವಿಟ್ಟು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:– ತಾವು ನಗುತ್ತಾ ಇದ್ದರೆ, ಇದು ಅವರ ತಲೆಗೆ ಹೋಗಲಿಲ್ಲವೇನೋ ಎಂದು ನಮಗೆ ಅನಿಸುತ್ತದೆ. ಇದು ಎಷ್ಟು ಎತ್ತರಕ್ಕೆ ಹೋಗಬೇಕಾಗಿತ್ತೋ;

ಅಷ್ಟು ಎತ್ತರಕ್ಕೆ ಹೋಗಲಿಲ್ಲವೇನೋ; ಅಥವಾ ತಮಗೆ ಕನ್‌ವಿನ್ಸ್ ಮಾಡುವುದಕ್ಕೆ ನಾವು ವಿಫಲರಾಗಿದ್ದೇವೋ ಏನೋ ಎಂದು ನನಗನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಆಧ್ಯಕ್ಷರು ನಕ್ಕರೂ ಕಷ್ಟ. ಸುಮ್ಮನೆ ಕೂತರೂ ಕಷ್ಟ; ಆ ಕಡೆ ತಿರುಗಿದರೂ ಕಷ್ಟ; ಈ ಕಡೆ ತಿರುಗಿದರೂ ಕಷ್ಟ. ನಮ್ಮಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಪರಿಸ್ಥಿತಿ ಇದೆ. ಆದ್ದರಿಂದ ಅವರು ಯಾವ ರೀತಿ ಇರಬೇಕೆಂದು ಒಂದು ತೀರ್ಮಾನ ಮಾಡಿದರೆ ಒಳ್ಳೆಯದು.

ಶ್ರೀ ಡಿ.ಬಿ. ಚಂದ್ರೇಗೌಡ:- ಆ ಕಾರಣ ತಾವು ನಿಸ್ಪಕ್ಷಪಾತವಾಗಿ ನೋಡುವುದಾದರೆ, ಇದನ್ನು ಪ್ರಿವಿಲೇಜ್ ಕಮಿಟಿಗೆ ನೇರವಾಗಿ ಕಳುಹಿಸುವುದಕ್ಕೆ ಬೇಕಾಗುವಷ್ಟು ಸಾಕ್ಷಿ ಆಧಾರಗಳು ಇವೆ. ಆದ್ದರಿಂದ ತಮ್ಮ ಮನ ಒಲಿಸುವುದಕ್ಕೆ ಬೇಕಾಗಿರತಕ್ಕ ಸಾಹಿತ್ಯ ಮತ್ತು ಪೂರಕವಾದಂಥ ಮೆಟೀರಿಯಲ್ಸ್ ಅನ್ನು ತಾವು ಚರ್ಚೆಗೆ ಅವಕಾಶ ಕೊಟ್ಟರೆ ನಾವು ಒದಗಿಸಲು ಅನುಕೂಲವಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಸಂಸದೀಯ ಸಚಿವರು ಹೇಳಿದ್ದು ನನಗೆ ಬಹಳ ನೋವು ಉಂಟು ಮಾಡಿದೆ. ನಾನು ಉಪಯೋಗಿಸಿದಂಥ ವಾಕ್ಯ, ಆ ವಾಕ್ಯದಲ್ಲಿ ಒಂದೇ ಒಂದು ಶಬ್ದ, ತಾವು ನನಗೆ ಪ್ರತಿಯನ್ನು ಒದಗಿಸಿದ್ದೀರಿ, ಆದರಲ್ಲಿ ಇಲ್ಲದೇ ಇದ್ದರೆ I will withdraw my notice. What the Hon'ble Minister says for this, I would like to know. ಸನ್ಮಾನ್ಯ ಆಧ್ಯಕ್ಷರೆ, ನಾನು ಕಳಿಸಿದಂಥ ಸೂಚನಾಪತ್ರದಲ್ಲಿ ಪ್ರತಿಯೊಂದು ಶಬ್ದವನ್ನು ಏನು ಹೇಳಿದ್ದೇನೆ, ಅದು ಇದರಲ್ಲಿ ಇದೆ. ಕೆಲವನ್ನು ಬಿಟ್ಟು ಅವರು ಓದಿದರು. ಆದಕ್ಕೋಸ್ಕರ ನಾನು ಇದನ್ನು ಹೇಳಬೇಕಾಗಿದೆ. ಅಂತಹ ಜನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ, ಅಂತಹ ಜನ ಅಂದರೆ ನೀವು ನಮಗೆ ಹೇಳಿದ್ದೀರಿ. ಹಿಂದಿನ ಜನತಾ, ಜನತಾದಳದ ಸದಸ್ಯರು ಅನ್ನುವುದರಿಂದ ನಾನು ಇನ್‌ವರ್‌ಟೆಡ್ ಕಾಮ ಹಾಕಿ ನಾನು ಪ್ರಾರಂಭ ಮಾಡಿದ್ದೇನೆ. ತಾವು ವೆರಿಫೈ ಮಾಡಿ. ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ, ಆಡಳಿತ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರೀಸ್ ಮಾಡಿ ಅದರಲ್ಲಿ ಅನೇಕ ಜನ ಲಕ್ಷಾವಧಿ ರೂಪಾಯಿ ಗಳಿಸಿ, ಏನೋ ಒಂದು ರೀತಿ ಬೆಳೆದುಕೊಂಡು ಬಂದಂಥ ಆವಾಗಿನ ಅನೇಕ ಜನ ಶಾಸಕರು ಇವತ್ತು ನನಗೆ ಬಹಳ ಕಡಿಮೆ ಇಲ್ಲಿ ಕಾಣಿಸುತ್ತಿದ್ದಾರೆ, "ಇಲ್ಲಿ" ಎನ್ನುವುದನ್ನು ಸಂಸದೀಯ ಸಚಿವರು ತೆಗೆದುಹಾಕಿದರು. ಜನ ಅವರಿಗೆ ಪಾಠ ಕಲಿಸಿದ್ದಾರೆ.

ಆಧ್ಯಕ್ಷರು:- ನನ್ನ ತಿಳುವಳಿಕೆಗೋಸ್ಕರ ನನ್ನ ಸೆಕ್ರೆಟರಿಯೇಟ್‌ನಲ್ಲಿ ಇದು ಕರೆಕ್ಟೆಡ್ ವರ್ಷನ್ನೇ. ಅನ್‌ಕರೆಕ್ಟೆಡ್ ವರ್ಷನ್ನೇ ಎಂದು ಕೇಳಿದೆ.

ಶ್ರೀ ಹೆಚ್. ಏಕಾಂತಯ್ಯ:- ಇರಬಹುದು, ತದನಂತರ ನಾನು ಹೇಳಿದ್ದೇನೆ. ಇಲ್ಲಿ ಏನು ಒಂದು ಪದವನ್ನು ಉಪಯೋಗಿಸಿದ್ದೇನೆ. ಆ ವಾಕ್ಯವನ್ನೇ ಹೇಳಲಿಕ್ಕೆ ಇಷ್ಟಪಡುತ್ತೇನೆ. ನಾನು ಎವೆರಿ ಲೆಜಿಸ್ಲೇಟರ್ಸ್ ಎಂದು ಹೇಳಲಿಲ್ಲ; ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಉದ್ಯೋಗ ಮಾಡಿಕೊಂಡಿದ್ದರು. ಈ ವಾಕ್ಯಗಳನ್ನು ನಾನು ನನ್ನ ಸೂಚನಾ ಪತ್ರದಲ್ಲಿ ಉಪಯೋಗಿಸಿದ್ದೇನೆ. ಇದು ಇದೆಯಾ; ತಾವು ನನಗೆ ತಮ್ಮ ಕಛೇರಿಯಿಂದ ಏನು ಒದಗಿಸಿದ್ದೀರಿ; ಆದನ್ನೇ ನಾನು ಓದುತ್ತಿರುವುದು.

ಆಧ್ಯಕ್ಷರು:- ಅದು ಅನ್‌ಕರೆಕ್ಟೆಡ್ ವರ್ಷನ್, ಕರೆಕ್ಟೆಡ್ ವರ್ಷನ್ ತಮಗೆ ಒದಗಿಸಲಾಗುವುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಯಾವಾಗ?

MR. SPEAKER :- As soon as it is ready.

ಶ್ರೀ ಹೆಚ್. ಏಕಾಂತಯ್ಯ:- ಅನ್‌ಕರೆಕ್ಟೆಡ್ ಅಂದರೆ ಸಂಬಂಧಪಟ್ಟ ಸಚಿವರಿಗೆ, ಅಥವಾ ಸದಸ್ಯರುಗಳಿಗೆ ಒದಗಿಸಿ, ಅವರು ತಿದ್ದಿಕೊಟ್ಟಂತಹ ವರ್ಷನ್ ಎಂದು ತಾವು ಹೇಳುವುದಾದರೆ ಸರಿ.

ಆಧ್ಯಕ್ಷರು:- ಹೌದು.

ಶ್ರೀ ಹೆಚ್. ಏಕಾಂತಯ್ಯ:– ಆದರಲ್ಲಿಯೂ ಸಹ ಸನ್ಮಾನ್ಯ ಸಚಿವರಾಗಲಿ, ಸನ್ಮಾನ್ಯ ಮುಖ್ಯಮಂತ್ರಿಗಳಾಗಲೀ, ನಾನಾಗಲೀ, ತಮಗೆ ಬೇಕಾದಂತೆ ಇಲ್ಲವೇ ನನಗೆ ಬೇಕಾದಂತೆ ತಿದ್ದುವುದಕ್ಕೆ ಅವಕಾಶ ಇಲ್ಲ. ಇವತ್ತಿನ ದಿವಸ ಏನು ಹೇಳಿದ್ದಾರೆ, ಇದರ ಬಗ್ಗೆ ಹೇಳಲಿಲ್ಲ ಎಂದು ಹೇಳುತ್ತಾರೆಯೇ ಅಥವಾ ಇದರ ಆಧಾರದ ಮೇಲೆ ಹಕ್ಕುಚ್ಯುತಿ ಆಗಿದೆ ಅಥವಾ ಇಲ್ಲ ಎಂಬುದರ ಬಗ್ಗೆ....

ಅಧ್ಯಕ್ಷರು: ನೀವು ನನಗೆ ಆನ್‌ಕರೆಕ್ಟೆಡ್ ವರ್ಷನ್ ಒದಗಿಸಿದ್ದೀರಿ. ಕರೆಕ್ಟೆಡ್ ವರ್ಷನ್ ಬಂದಮೇಲೆ ಅದನ್ನು ನಾನು ನೋಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:– ಅಲ್ಲಿಯವರೆಗೆ ಕಾಯಬೇಕಾಗಿಲ್ಲವೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ.....

SRI D.B. CHANDRE GOWDA:- This is a new thing. Corrected version is for the purpose of printing.

MR. SPEAKER:- What is relevant for the purpose of printing is also relevant for me to decide whether it amounts to breach of privilege or not.

SRI D.B. CHANDRE GOWDA :- What is on the record to-day?

MR. SPEAKER:- What is on record as I am told by my secretariat is an uncorrected copy of the Chief Minister's reply. I am awaiting the corrected copy of the Chief Minister's reply. After it is received from his office and tomorrow if there is a privilege directed against, I am posing a hypothetical proposition....

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಏಕಾಂತಯ್ಯನವರು ಸ್ವಲ್ಪ ಪರಾಂಬರಿಸಬೇಕು. ಈ ಪ್ರೊಸೀಡಿಂಗ್ಸ್ as it is ಏನು what is produced in your notice there is a difference.

MR. SPEAKER: I will come to it little later. Right now I am in the initial stages. When they came and asked me that Sri Ekanthaiah wants the proceedings of the House, I ordered the office to give him the uncorrected version of the speech of the Chief Minister. Now I do not know. I think there is 24 hours time gap before which if there is no response from any member then it goes as it is without being corrected.

ಶ್ರೀ ಡಿ.ಬಿ. ಚಂದ್ರೇಗೌಡ:– ಈಗ ಸಂಸದೀಯ ನಡವಳಿಕೆಗಳಿಗೆ ತಾವೂ ಹೊಸಬರಲ್ಲ, ನಾವೂ ಹೊಸಬರಲ್ಲ. I am not trying to say anything or attributing anything. ನನ್ನ ಭಾವನೆ ಏನು ಇದೆ ಅಂದರೆ, ಕರೆಕ್ಟೆಡ್ ವರ್ಷನ್ ಬರುವತನಕ ಪ್ರಿವಿಲೇಜ್ ನೋಟೀಸ್‌ಗೆ ಕಾಯಬೇಕು ಎನ್ನತಕ್ಕಂತಾದ್ದು ನನ್ನ ಅನುಭವದಲ್ಲಿ ಇಲ್ಲ. ಸದನದಲ್ಲಿ ಏನಿದೆಯೋ, ನಮಗೆ ಏನು ಪ್ರತಿ ಸಿಕ್ಕಿದೆಯೋ, that itself is a part and parcel of the records. ಆಮೇಲೆ ಅವರಿಗೆ ಕರೆಕ್ಷನ್‌ಗೆ ಕಳುಹಿಸಿ, ಅವರಿಂದ ಬರತಕ್ಕಂತಾದ್ದು, ಮುಂದೆ ಪ್ರಿಂಟ್ ಮಾಡುವುದು, ನನಗೆ ಗೊತ್ತಿಲ್ಲ. ಅದಕ್ಕೆ ತಮಗೆ ಹೇಳಿದೆ, ಪ್ರಿಂಟೆಡ್ ಕೂಡ ಈ ಸದನದಲ್ಲಿ ತಪ್ಪಾಗಿ ಪ್ರಿಂಟ್ ಆಗಿದೆ ಎಂದು ಹೇಳಿ ಇದು ಅಲ್ಲ, ಒರಿಜಿನಲ್ ತರಿಸಿ ಎಂದು ಹೇಳಿದ ಪ್ರಕರಣ ಕೂಡ ಆಗಿದೆ. ಆದರೆ ನಾವು ಇಲ್ಲಿ ಚರ್ಚೆಗೆ ಬಳಸಿಕೊಳ್ಳತಕ್ಕಂತಾದ್ದು, ತಕ್ಷಣ ನಮಗೆ ಏನು ಮಾಹಿತಿ ಸಿಕ್ಕುತ್ತದೆ, ಅದೇ ನಮಗೆ ಆಧಾರ. and that is relevent. It cannot be corrected afterwards to avoid these things. ನಾವು ಆದರ ಮೇಲೆ ಬೇಕಾದರೆ ವ್ಯಾಖ್ಯಾನ ಮಾಡೋಣ. But as on today, ಇವೊತ್ತಿಗೆ ಏನು ದಾಖಲೆ ಇದೆ, ಸನ್ಮಾನ್ಯ ಸದಸ್ಯರಿಗೆ ಏನು ಕೊಟ್ಟಿದ್ದೀರಿ, ಇದರಲ್ಲಿ ಹಕ್ಕುಚ್ಯುತಿ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಇದನ್ನೆಲ್ಲಾ ವಿಷದವಾಗಿ ಹೇಳಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ:- ಅಧ್ಯಕ್ಷರೆ, ತಾವು ಆದೇಶ ಕೊಡಿಸಿದ್ದೀರಿ, ಏಕೆಂದರೆ

ಅಧ್ಯಕ್ಷರು:- ಆದೇಶ ಕೊಡಲಿಲ್ಲ. It is all loud thinking. ಆದೇಶ ಅಂದರೆ ರೂಲಿಂಗ್ ಎಂದು ತಿಳಿದುಕೊಳ್ಳಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ: ಅಧ್ಯಕ್ಷರೆ, ತಾವು ಹೇಳಿದ್ದನ್ನು ನಾನು ತೀರ್ಪು ಎಂದು ಹೇಳುತ್ತಿಲ್ಲ. What I am referring to your kindself and as such to this House is, now uncorrected version is before this House. On that basis the Opposition or Mr.Ekanthaiah and Mr.Byre Gowda have given notices. That is one part of it, which is not available. Even the only one portion, which has got to be read, the whole statement of the Chief Minister will have to be read.

MR. SPEAKER:- In its totality.

SRI M. VEERAPPA MOILY:- In totality, not in part. Even with regard to the reproduction of the proceedings, I have already said. ಏಕೆಂದರೆ ನಮ್ಮ ಸನ್ಮಾನ್ಯ ಏಕಾಂತಯ್ಯನವರು, ಒಮ್ಮೆಲೇ ಅವರಿಗೆ ಬೇಸರ ಆಯಿತು ಎಂದು ಹೇಳಿದರು. ಆದರೆ, ತಾವು ದಯಮಾಡಿ ಪುನ: ಪರಾಂಬರಿಸಬೇಕು. ಆದರಲ್ಲಿ ಬಹಳ ವ್ಯತ್ಯಾಸ ಇದೆ. ತಾವು ಹೇಳಿದಿರಿ, ಇದು as it is produced in the notice also taken out of context ಆದನ್ನೇ ನಾನು ಹೇಳುತ್ತಿದ್ದೇನೆ. ಏಕೆಂದರೆ ತಾವು ಹೇಳಿದಿರಿ, "ಜನತಾ, ಜನತಾದಳದ ಸದಸ್ಯರು ಅಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತದ ವರ್ಗಾವರ್ಗಿ ಎಂದು ಹೇಳಿದಿರಿ." ಇದು ನಮ್ಮ ಪ್ರೊಸಿಡಿಂಗ್ಸ್. ಏಕೆಂದರೆ, ಸನ್ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. I am producing as it is, we need not wait for the corrected version ಎಂದು. Even assuming that we need not wait for the corrected version, what is there on the record is a matter to be considered because message should not go around that something has been said by the Chief Minister. ಆದನ್ನು ಪೂರ್ತಿ ಸಂಪೂರ್ಣ ಸ್ವರೂಪದಲ್ಲಿ ತೆಗೆದುಕೊಳ್ಳಬೇಕೇ ಹೊರತು ಎಲ್ಲಿಂದಲೋ ಹೆಕ್ಕಿ ಈ ರೀತಿ ಸೂಚನೆಯನ್ನು ಕೊಡತಕ್ಕಂಥಾದ್ದು, ಸರಿ ಬರುವುದಿಲ್ಲ. Actually it is so ಆಡಳಿತದಲ್ಲಿ ಸಿಕ್ಕಾಪಟ್ಟೆ ಜನತಾ ಪಕ್ಷ, ಮತ್ತು ಜನತಾ ದಳದ ಮುಖಂಡರು ಪ್ರಮುಖರು, ಪ್ರತಿನಿಧಿಗಳ ಹಸ್ತಕ್ಷೇಪ....Actually, it is so. ಆದ್ದರಿಂದ ಕೆಟ್ಟ ಹೆಸರು ಬಂತು. ಇನ್‌ವರ್‌ಟೆಡ್ ಕಾಮಾದಲ್ಲಿ ಹೀಗೆ ಹೇಳಿದ್ದಾರೆ:-

"ಹಿಂದಿನ ಜನತಾ - ಜನತಾದಳ ಸದಸ್ಯರು ಅಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರೀ ಮಾಡಿ ಲಕ್ಷಾವಧಿ ರೂಪಾಯಿ ಗಳಿಸಿ ಎಂದು ಒಂದು ವಾಕ್ಯದಲ್ಲಿ ಬರೆದು ನೋಟೀಸ್ ಕೊಟ್ಟಿದ್ದಾರೆ. It does not rest with only legislators, their representatives, leaders and so many other people. As one sentence they have build up. Actually it is not so.

(INTERRUPTION)

ಶ್ರೀ ಬಿ.ಹೆಚ್. ಬನ್ನಿಕೋಡ್:- ನಮಗೆ ಮಾತನಾಡಲು ಅವಕಾಶ ಸಿಕ್ಕಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ನಾನು ಹೇಳುವುದನ್ನು ಸ್ವಲ್ಪ ಕೇಳಿ. ತಾವು ಈ ರೀತಿ ಪದೇ ಪದೇ ಎದ್ದೇಳುವುದು ಸರಿಯಲ್ಲ. I think I am entitled for my say. Let me complete my point.

(INTERRUPTION)

SRI M. VEERAPPA MOILY:- I think the Hon'ble Speaker has permitted me and I can speak here.

(INTERRUPTION)

SRI. B.H. BANNIKOD:- Sir.... (INTERRUPTION)

SRI M. VEERAPPA MOILY:- You give notice... It is a distorted version of the extract. Let me complete it. I am going to make out a case. Notice itself is incorrect, it does not represent actual facts which are on record. Assumptions have been taken on certain incorrect versions of the Proceedings. I think inlimine it has to be dismissed. It cannot even come for discussion in this House. I can understand even if they give notice on the basis of uncorrected Proceedings and the same is enclosed, that would have been maintainable. If the notice is given on the basis of the extract taken out by the Proceedings which is totally distorted, it may mislead this House. How can you consider this? If the hon'ble members are particular I think, they can give a fresh notice. This notice reflects totally distorted version of the Proceedings. They have build up the whole notice by taking out one sentence from the Proceedings, which is not so in the Proceedings. It suffers from a very serious lacunae.

MR. SPEAKER:- I will see the a copy of the notice.

(INTERRUPTION)

SRI M. VEERAPPA MOILY:- Till the hon'ble Speaker permits me to sit I am on my legs. This notice gives impression as if the Hon'ble Chief Minister has straightaway said it.

ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬೇಡಿಕೆಯ ಚರ್ಚೆಯಲ್ಲಿ ಭಾಗವಹಿಸಿ ಹೀಗೆ ಹೇಳಿದ್ದಾರೆಂದು ಈ ನೋಟೀಸಿನಲ್ಲಿ ಇನ್‌ವರ್ಟೆಡ್ ಕಾಮಾ ಹಾಕಿ ಹೇಳಿದ್ದಾರೆ ಅದೇನೆಂದರೆ "ಹಿಂದಿನ ಜನತಾ - ಜನತಾದಳ ಸದಸ್ಯರು ಅಂದಿನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಆಡಳಿತದ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ ಲಕ್ಷಾವಧಿ ರೂಪಾಯಿ ಗಳಿಸಿ ಏನೋ ಒಂದು ರೀತಿಯಲ್ಲಿ ಬೆಳೆದುಕೊಂಡು ಬಂದಂತಹ ಅನೇಕ ಜನ ಆವಾಗಿನ ಶಾಸಕರು ಇವತ್ತು ಬಹಳ ಕಡಿಮೆ ಇಲ್ಲಿ ಕಾಣಿಸುತ್ತಿದ್ದಾರೆ" ಎಂದು ಹೇಳಿದ್ದಾರೆ. which is not the version here. Even in uncorrected version, it conveys totally categorical meaning which is not conveyed in the extract. If these things were seen, Mr. Byregowda would not have signed this notice.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:– ಹೋಗಲಿ, ಕರೆಕ್ಟೆಡ್ ವರ್ಷನ್ ಏನು ಹೇಳಿ.

(ಗೊಂದಲ)

MR. SPEAKER:- I would like to quote from the 'Practice and Procedure of Parliament' by Kaul and Shakdher (Page 856)

"Since the official Report has to be a correct reproduction of the speeches actually delievered in the House, members are not permitted to improve the literary form of their speeches by additions or deletions. A paragraph is also inserted from time to time in the Bulletin to inform members that the speeches are sent to them only for confirmation and for the purpose of correcting inaccuracies, if any, and not for improving the literary form or altering the substence of the speeches. While grammatical corrections, or corrections of a word here and there, or change of a clause from one place to another are permitted any material correction which would mean a deviation from the substance of what the member said is not permitted"

I find some inverted camas. I just wanted to ascertain whether this copy of the speech has been sent and corrected and submitted. There is time frame also. If you do not submit within 24 hours, and if our Secretary do not hear from the concerned hon'ble Member, then it goes as reported or as recorded.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿಮಾಡಿಕೊಂಡಿದ್ದು ಏನೆಂದರೆ, ಕರೆಕ್ಷನ್ಸ್‌ಗೆ ಕಳುಹಿಸುವುದು, 24 ಗಂಟೆಗಳಲ್ಲಿ ಅದನ್ನು ಸಂಬಂಧಪಟ್ಟ ಸದಸ್ಯರು ವಾಪಸ್ ಕಳುಹಿಸಿಕೊಡಬೇಕೆಂದಿದೆ. ಆದರೆ ಇದು ಅದಲ್ಲ. ಅನ್ ಕರೆಕ್ಟೆಡ್ ಇದ್ದರೂ ಕೂಡ ನಮ್ಮ ಪ್ರೊಸಿಷನ್‌ನಲ್ಲಿ ಏನು ದಾಖಲೆ ಇದೆ, ಅದು ನಾವು ದಾಖಲಿಸಿಕೊಂಡಂಥ ದಾಖಲೆ. ಇದು ನಮ್ಮ ಪ್ರಿವಲೇಜ್‌ನ್ನು ಚರ್ಚೆಮಾಡಲಿಕ್ಕೆ ಬಾಧಕವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು. ಇನ್ವರ್ಟೆಡ್ ಕಾಮಾ ಹಾಕಿದ್ದು that is only to emphasis.

MR. SPEAKER:- That is why I wanted to get...

SRI M. VEERAPPA MOILY:- He has gone a step further. ಮಾನ್ಯ ಸದಸ್ಯರಾದ ಬೈರೇಗೌಡರು ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿದರು. I can read out. That is why I said this whole statement should be taken out in totality. ಈ ಬಗ್ಗೆ ಮಾನ್ಯ ವೀರೇಂದ್ರಪಾಟೀಲರು ಏನು ಹೇಳಿದರೆಂದರೆ, ನಾನು ಎವ್ವೆರಿ ಲೆಜಿಸ್ಲೇಟರ್ಸ್ ಎಂದು ಹೇಳಲಿಲ್ಲ, ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಉದ್ಯೋಗವನ್ನಾಗಿ ಮಾಡಿಕೊಂಡಿದ್ದರು, ಅಂಥ ಜನ ಇವತ್ತು ಇಲ್ಲಿ ಕಾಣುತ್ತಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದೆ. ಎಲ್ಲರೂ ಇದೇ ಮಾಡಿದ್ದಾರೆಂದು ಹೇಳುವಹಾಗೆ ಹೇಳಿಲ್ಲ. ಹೇಳುವುದಕ್ಕೆ ಹೋಗುವುದಿಲ್ಲ. ಒಂದುವೇಳೆ ಹಾಗೆ ಹೇಳಿದ್ದರೂ ಅದನ್ನು ನಾನು ವಾಪಸು ತೆಗೆದುಕೊಳ್ಳುತ್ತೇನೆ. ಬಹಳ ಜನ ಇದನ್ನು ಮಾಡಿ ಪರಿಸ್ಥಿತಿ ಏನಾಯಿತು? This is what some explanation has been given. Therefore, assumption is also incorrect. Even the conclusion is also incorrect as far as the notice is concerned. This has got to be dismissed inlimine. It they make out a privilege case, authentic documents should be produced. Inview of this, it should be dismissed inlimine. If there is any, if they make out any let them give a fresh notice. After all, ಪ್ರಿವಿಲೇಜ್ ಮೋಷನ್ ಕೊಡುವಾಗ they will have to produce authentic documents. Authenticated document is to be produced

along with the privilege motion. Inview of this, the Hon'ble Speaker cannot entertain and perhaps it should be dismissed inlimine.

SRI D.B. CHANDRE GOWDA:- I would like to ask a simple question. I would like to know from the Chair, whatever we get here, according to the Law Minister, it is not authenticated. Do I take it that way? The Hon'ble Minister says that privilege motion notice should accompany authenticated documents. Whatever we get from this House as Proceedings of this House, does he mean to say that they are not authenticated? ಅವರು ಏನು ಹೇಳಿದರೆಂದರೆ ಪ್ರಿವಿಲೇಜ್ ನೋಟೀಸ್ ಕೊಡುವಾಗ ಅಥೆಂಟಿಕೇಟೆಡ್ ಡಾಕ್ಯುಮೆಂಟ್ಸ್ ಕೊಡಬೇಕು ಎಂದು; ಆದರೆ ನಾವು ಇದನ್ನು ಅಥೆಂಟಿಕೇಟೆಡ್ ಎಂದು ತಿಳಿದಿಕೊಂಡಿದ್ದೇವೆ.

SRI MALLIKARJUNA S. KHARGE:- It should be viewed in totality.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಖಾರ್ಗೆಯವರೇ ತಾವು ಹಿರಿಯಸದಸ್ಯರಾಗಿದ್ದೀರಿ. ಅವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಅವರು ಏನು ಹೇಳಿದರು, ಪ್ರಿವಿಲೇಜ್ ನೋಟೀಸ್ ಕೊಡುವಾಗ ಅಥೆಂಟಿಕೇಟೆಡ್ ಡಾಕ್ಯುಮೆಂಟ್‌ನ್ನು ಕೊಡಬೇಕು ಎಂದು. ಈಗ ಇದು ನಮಗೆ ಅಥೆಂಟಿಕೇಟೆಡ್ ಡಾಕ್ಯುಮೆಂಟ್ ಎಂದು ನಾವು ತಿಳಿದುಕೊಂಡಿದ್ದೇವೆ. ಚರ್ಚೆ ಮಾಡತಕ್ಕದ್ದು ಅಥೆಂಟಿಕೇಟೆಡ್ ಎಂದು. ಪತ್ರಿಕೆಯವರು ಬರೆದರೆ ಅದದು ಅಥೆಂಟಿಕೇಟೆಡ್ ಅವರು ಬರೆಯದಿದ್ದರೆ ಅದು ಅಥೆಂಟಿಕೇಟೆಡ್ ಅಲ್ಲ ಎಂದು ಹೇಳುವುದಕ್ಕಾಗುವುದಿಲ್ಲವೆಂದು ತಾವೇ ಹೇಳಿದ್ದೀರಿ.

SRI M. VEERAPPA MOILY:- I do not want to exercise my discretion on that. It is left to the Chair. I would like to know from the Chair whether the extract as produced in inverted camas is the notice of the privilege motion is authenticated? According to me, what is put in the inverted camas, in the notice is a distorted version of what it appeared even in the uncorrected Proceedings. This is my submission. I leave it to the House.

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಂಸದೀಯ ಮಂತ್ರಿಗಳು ಹೇಳಿದ್ದನ್ನು ನಾನು ಕೇಳಿದ್ದೇನೆ. ಅವರು ಯಾವಾಗಲು ನಾವು ಹೇಳಿದ್ದನ್ನು ವಿರೂಪಗೊಳಿಸುವುದರಲ್ಲಿ ಬಹಳ ಪ್ರಸಿದ್ಧರು...

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ಹಾಗೆ ಹೇಳುವುದಾದರೆ, ಹಳದಿ ರೋಗ ಬಂದಿರುವವರಿಗೆ ನೋಡಿದ್ದೆಲ್ಲಾ ಹಳದಿಯಾಗಿಯೇ ಕಾಣುತ್ತದೆ. ತಮಗೆ ಅದೇ ಆಗಿರಬೇಕು. ಸ್ವರೂಪ ಇರತಕ್ಕದ್ದೆಲ್ಲಾ ನಿಮಗೆ ವಿರೂಪವಾಗಿ ಕಂಡರೆ I think the medicine is with you and not with me. ಅಷ್ಟೊಂದು ಸುಲಭವಾಗಿ ತಾವು ಹೇಳಬಾರದು.

† ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ್ದನ್ನು ನಾನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇನೆ. ಅವರು ಹೇಳುತ್ತಾರೆ, ಇನ್ವರ್ಟೆಡ್ ಕಾಮಾದಲ್ಲಿ ಹೇಳಿರತಕ್ಕ ಮಾತು ಪ್ರೊಸೀಡಿಂಗ್ಸ್‌ನ ಒಂದು ಭಾಗ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ನಾನು ಮೊಟ್ಟಮೊದಲು ಹೇಳುತ್ತೇನೆ, ಅವರು ಆ ರೀತಿ ಭಾವಿಸುವುದಕ್ಕೆ ಏನೋ ಆಧಾರ ಇದೆ. ನಾನು ಏನು ಹೇಳಿದ್ದೇನೆ ಎಂಬುದನ್ನು ಪುನಃ ಪುನಃ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ವರ್ಟೆಡ್ ಕಾಮಾದಲ್ಲಿ ಏನು ಪ್ರಾರಂಭ ಮಾಡಿದ್ದೆ, ಅದು ಅಡಳಿತದಲ್ಲಿ ಹಸ್ತಕ್ಷೇಪ ಮಾಡಿ, ಅಡಳಿತ ವರ್ಗಾವರ್ಗಿಯನ್ನು ಒಂದು ದೊಡ್ಡ ಇಂಡಸ್ಟ್ರಿ ಮಾಡಿ 'ಲಕ್ಷಾವಧಿ ರೂಪಾಯಿ ಗಳಿಸಿ ಏನೋ ಒಂದು ರೀತಿಯಲ್ಲಿ ಬೆಳೆದುಕೊಂಡು ಬಂದಂಥ ಅನೇಕ ಜನ ಅವಾಗಿನ ಶಾಸಕರು ಇವತ್ತು ಬಹಳ ಕಡಿಮೆಯಲ್ಲಿ ಕಾಣಿಸುತ್ತಿದ್ದಾರೆ. ಜನ ಅವರಿಗೆ ಪಾಠ ಕಲಿಸಿದ್ದಾರೆ. ನಾನು ಎವ್ವೆರಿ ಲೆಜಿಸ್ಲೇಟರ್ ಎಂದು ಹೇಳಲಿಲ್ಲ;

ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಒಂದು ಉದ್ಯೋಗ ಮಾಡಿಕೊಂಡಿದ್ದರು. ಎಂದು ಮುಂತಾಗಿ ಹೇಳಿದ್ದಾರೆ, ನಾನು ಅವರು ಹೇಳಿದ್ದನ್ನು ಇನ್ನೂ ಸ್ವಲ್ಪ ಓದಿ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಆಂದಿನ ಜನತಾ ಮತ್ತು ಜನತಾ ದಳದ ಸದಸ್ಯರ ಬಗ್ಗೆ ವ್ಯಕ್ತಮಾಡಿದ ಅಭಿಪ್ರಾಯ ಸದನದ ಸದಸ್ಯರ ಹಕ್ಕು ಚ್ಯುತಿಯಾಗಿರುತ್ತದೆ. ಈ ಬಗ್ಗೆ ಪ್ರಸ್ತಾಪಿಸಲು ಅಧ್ಯಕ್ಷರ ಅನುಮತಿ ಕೋರಿ ಈ ಸೂಚನೆ ನೀಡಿರುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳ ಭಾಷಣದ ಪ್ರತಿಯನ್ನು ಕೋರಿ ಅರ್ಜಿ ಸಲ್ಲಿಸಿರುತ್ತೇನೆ. ಪ್ರತಿ ತಲುಪಿಲ್ಲವಾದ್ದರಿಂದ ಸದರಿ ಪ್ರತಿಯನ್ನು ಲಗತ್ತಿಸಿರುವುದಿಲ್ಲ. ಈ ವಿಷಯವನ್ನು ಇಂದು ಪ್ರಸ್ತಾಪಿಸಲು ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಕಾರಣವನ್ನು ಸಹ ಹೇಳಿದ್ದೇನೆ. ನಾನು ಈ ನಿಯಮಗಳನ್ನು ನೋಡದೆ ಕಣ್ಣುಮುಚ್ಚಿಕೊಂಡು ಅವರು ಹೇಳುವಂಥ ರೀತಿಯಲ್ಲಿ ಕಳಿಸಿಲ್ಲ. ಈ ನಿಯಮಗಳಿಗೆ ಆಧಾರವಾದಂಥ ದಸ್ತಾವೇಜ್‌ಗಳನ್ನು ನಾವು ಕಳುಹಿಸಬೇಕಿದ್ದುದರಿಂದ ನಾನು ಮೊನ್ನೆ ದಿವಸ ಇದರ ಪ್ರತಿಗಾಗಿ ತಮ್ಮಲ್ಲಿ ವಿನಂತಿಸಿಕೊಂಡೆ. ನಾನು ಈ ಸೂಚನೆ ಕೊಡುವವರೆಗೆ ನನಗೆ ಪ್ರತಿ ತಲುಪಿಲ್ಲವಾದ್ದರಿಂದ ನಾನು ಈ ಪ್ರತಿಯನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಅಧ್ಯಕ್ಷರೇ, ಇವತ್ತಿನದಿವಸ ನಾನು ಹೇಳಿದಂಥ ವಿಷಯವನ್ನು ಕೇವಲ ಇದರಲ್ಲಿ ಇರುವಂಥ ಒಂದು ಭಾಷಣದ ಆಧಾರದಮೇಲೆ ಉದ್ದರಿಸಿದ್ದೇವೆ. ಅದರ ಆಧಾರದ ಮೇಲೆ ತಾವು ತೀರ್ಮಾನ ಮಾಡಬೇಕಾಗಿಲ್ಲವೆನ್ನುವ ಮಾತನ್ನು ನಾನು ಒಪ್ಪುತ್ತೇನೆ. ಇವತ್ತಿನ ದಿವಸ ತಾವು ನನಗೆ ಏನು ಆನ್-ಕರೆಕ್ಟೆಡ್ ಕಾಪಿ ಕೊಟ್ಟಿದ್ದೀರಿ. ಅದರ ಪೂರ್ಣಪಾತವನ್ನು ತಾವು ನೋಡಬೇಕು. ಅದಕ್ಕಿಂತ ಮೊದಲೆ ಆ ಪೂರ್ಣಪಾತವನ್ನು ತಾವು ಗಮನಿಸಿದ್ದೆ ಆದರೆ ಈವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ. ಆ ಹೇಳಿದಂಥ ವಿಚಾರ. ಈ ಸದಸ್ಯರ ಆದರಲ್ಲೂ ಸಹ ಈ ಕಡೆ ಸದಸ್ಯರು ಯಾರು ಇದ್ದರು, ಜನತಾ ಮತ್ತು ಜನತಾದಳದ ಸದಸ್ಯರು ಅವತ್ತಿನದಿವಸ ದುರ್‌ವ್ಯವಹಾರ ಮಾಡಿ ಲಾಭಗಳಿಸಿ ಇಲ್ಲಿ ಬಂದು, ಈವತ್ತಿನ ದಿವಸ ಸ್ವಲ್ಪಜನ ಕಾಣಿಸುತ್ತಿದ್ದಾರೆಂಬ ಮಾತನ್ನು ಏನು ನೇರವಾಗಿ ಆರೋಪ ಮಾಡಿದ್ದಾರೆ, ಈ ಆರೋಪದಿಂದ ನಮ್ಮ ಹಕ್ಕುಚ್ಯುತಿಯಾಗಿದೆಯೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಮಾನ್ಯ ಸಂಸದೀಯ ವ್ಯವಹಾರ ಸಚಿವರು ಏನು ಹೇಳಿದ್ದಾರೆ, ಅದರಲ್ಲಿ ಅರ್ಥವಿಲ್ಲ. ದಯವಿಟ್ಟು ತಾವು ಇದನ್ನು ಪರಿಶೀಲನೆ ಮಾಡಿ ಒಂದು ರೂಲಿಂಗನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಅದೇ ಮಾತನ್ನು ನಾವು ಅವರಿಗೆ ಹೇಳಲಿಕ್ಕೆ ಬರುತ್ತದೆ. ಅದು ಬರುವುದಿಲ್ಲವೆಂದು ಹೇಳಬೇಡಿ. ಆದಕಾರಣದಿಂದ ನಾನು ನಿಮ್ಮನ್ನು ಕೇಳುತ್ತಿದ್ದೇನೆ, ಇವತ್ತಿನ ದಿವಸ ಯಾವ ಒಂದು ಆರೋಪ ನಮ್ಮಮೇಲೆ ಮಾಡಿದ್ದೀರಿ, ಅದಕ್ಕಿಂತ ಗಂಭೀರವಾದ ಆರೋಪಗಳನ್ನು ನಿಮ್ಮ ಮೇಲೆ ಮಾಡಲಿಕ್ಕೆ ತಯಾರಿದ್ದೇವೆ. ಅದಕ್ಕೆ ತಾವು ತಯಾರಾಗಿದ್ದೀರಾ? ಆದ್ದರಿಂದ ಇದಕ್ಕೆ ಒಂದು ಇತಿಶ್ರೀ ಆಗಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಅದು ಯಾವ ದೃಷ್ಟಿಯಿಂದ ಹೇಳಿದರೋ, ಅವರ ಉದ್ದೇಶ ಏನಿತ್ತೋ ಅದು ಬೇರೆ ಪ್ರಶ್ನೆ. ಅವರು ಬಳಸಿದಂತಹ ಪದಗಳಿಂದ ನಮಗೆ ಹಕ್ಕುಚ್ಯುತಿಯಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಒಂದು ಪಕ್ಷ ಇದು ಹಕ್ಕುಚ್ಯುತಿಯಾಗಿಲ್ಲವೆಂದು ತಮ್ಮ ಆದೇಶ ಆಗುವುದಾದರೆ ಆದೇ ಮಾತನ್ನು ನಾವು ಉಪಯೋಗಿಸುವುದಕ್ಕೆ ನಮಗೆ ಅಧಿಕಾರ ಇರುತ್ತದೆ. ಆ ದೃಷ್ಟಿಯಿಂದ ನಾನು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ, ಇವತ್ತಿನದಿವಸ ತಾವು ಒಂದು ನಿರ್ಣಯವನ್ನು ಕೊಡಬೇಕೆಂಬ ಮಾತನ್ನು ಒತ್ತಾಯಪೂರ್ವಕವಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು :- ಒಂದು ವೇಳೆ ಹೇಳಿದ್ದರೂ ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ?

(ಗೊಂದಲ)

† ಶ್ರೀ ಸಿ. ಬೈರೇಗೌಡ:- ಮಾನ್ಯ ಸಂಸದೀಯ ಸಚಿವರು ಏನು ಮಾಡಿದ್ದಾರೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ಮಾತ್ರ ಹೇಳಿದ್ದಾರೆ. ನಾನು ಯಾವ ವಿಚಾರ ಪ್ರಸ್ತಾಪ ಮಾಡಿದ್ದೇನೆ, ಆ ವಿಚಾರಕ್ಕೆ ಅವರು ಉತ್ತರ ಹೇಳಿರತಕ್ಕಂಥದ್ದು. ನಾನೇನು ಪ್ರಸ್ತಾಪ ಮಾಡಿದ್ದೇನೆ ಎನ್ನುವುದನ್ನು ಕೂಡ ದಯವಿಟ್ಟು ಅವರು ಓದಬೇಕು.

ಅಧ್ಯಕ್ಷರು:- ಅದಕ್ಕೆ ನನ್ನದೇನು ಆಕ್ಷೇಪಣೆ ಇಲ್ಲ. ಆದರೆ ತಾವು ಏನು ಹೇಳಿದ್ದೀರೆಂದರೆ, every legislator was treating his constituency as his empire, any medical officer, any sub-inspector, any circle inspector without the persmission of the legislator, without the appproval of the legislator he cannot take charge ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದನ್ನು ತಾವು ದಯವಿಟ್ಟು ಎಲ್ಲರಿಗೂ ಸಾರಾಸಗಟಾಗಿ ಹೇಳಬೇಡಿ. 100ಕ್ಕೆ 100ಭಾಗ ಆರೀತಿ ನಡೆದೇ ಇಲ್ಲ ಎಂದು ಹೇಳುವವನು ನಾನಲ್ಲ. 'ನೀವಲ್ಲ' ನಿಮ್ಮ ಸರ್ಕಾರದಲ್ಲೂ ಅದಕ್ಕಿಂತ ಹಿಂದೆ ಏನಿತ್ತೋ ಅದಕ್ಕಿಂತ ಹೆಚ್ಚು ನಡೆದಿದೆ. ಆ ಪ್ರಶ್ನೆ ಬೇರೆ, ಎಲ್ಲವನ್ನು ಕೂಡ ಜನರಲೈಸ್ ಮಾಡುವುದಕ್ಕೆ ದಯವಿಟ್ಟು ಹೋಗಬೇಡಿ. ಶ್ರೀ ವೀರೇಂದ್ರಪಾಟೀಲ್ ನಾನು ಎವ್ವೆರಿ ಲೆಜಿಸ್ಲೇಟರ್ ಎಂದು ಹೇಳಲಿಲ್ಲ. ಬಹಳ ಮಟ್ಟಿಗೆ ಲೆಜಿಸ್ಲೇಟರ್ಸ್ ಇದನ್ನು ಉದ್ಯೋಗ ಮಾಡಿಕೊಂಡಿದ್ದರು, ಅಂಥ ಜನ ಇವೊತ್ತು ಇಲ್ಲಿ ಕಾಣಿಸುತ್ತಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲರೂ ಹೀಗೆ ಮಾಡಿದ್ದಾರೆಂದು ಹೇಳುವಹಾಗಿಲ್ಲ. ಹೇಳಿಲ್ಲ, ಹೇಳುವುದಕ್ಕೆ ಹೋಗುವುದೂ ಇಲ್ಲ. ಒಂದು ವೇಳೆ ಹೇಳಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ ಇದರ ಮುಂದಿನ ಭಾಗವನ್ನು ಸಹ ಓದುತ್ತೇನೆ. "ಆದ್ದರಿಂದ ಬಹಳ ಜನ ಇದನ್ನು ಮಾಡಿ ಪರಿಸ್ಥಿತಿ ಏನಾಯಿತು? ಚುನಾವಣೆ ಬಂದಾಗ ಅವರಿಗೆ ಬೇಕಾದ ಎಲ್ಲ ಆಫೀಸರ್ಸ್ ಇದ್ದರು. ಮತ್ತು ಎಲ್ಲಾ ರೀತಿಯಲ್ಲಿ ಕೂಡ ಅವರು ಹೇಳಿದಂತೆ ಅವರ ಸನ್ನೆ ಮೇಲೆ ಕೆಲಸ ಮಾಡುವಂಥ ಅಧಿಕಾರಿಗಳು ಇದ್ದರು ಮತ್ತು ಎಂ.ಎಲ್.ಎ.ಗಳಿಗೂ ಅಧಿಕಾರ ರೂಢ ಪಕ್ಷ ಇದ್ದಾಗ ಅವರು ಹತ್ತಿರ ಸಾಕಾದಷ್ಟು ದುಡ್ಡು. ಅಧಿಕಾರ ವ್ಯವಸ್ಥೆ ಎಲ್ಲ ಇದ್ದೂ ಕೂಡ ಅನೇಕ ಜನ ಪುಢಾರಿಗಳು ಜನತಾ ದಳದ್ದು ಎಂದು ಸಾಕಷ್ಟು ಖರ್ಚುಮಾಡಿಕೊಂಡರು. ಆದರೆ ದುಡಿದು ಕೆಲಸ ಮಾಡಲಿಲ್ಲ. ಆಗ ಶ್ರೀ ವಾಟಾಳ್ ನಾಗರಾಜ್ ಅವರು ಪುಢಾರಿ ಎಂದರೆ ಕೆಟ್ಟ ಅರ್ಥ ಬರುತ್ತದೆಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅಲ್ಲಿಗೆ ನಿಲ್ಲಿಸಿಬಿಟ್ಟಿದ್ದರೆ ಸರಿ, ನಾನು ವಾಪಸ್ ತೆಗೆದುಕೊಳ್ಳುತ್ತೇನೆಂದು ಹೇಳಿ ಮತ್ತೆ ಮುಂದಕ್ಕೆ ಹೋಗಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ:- ಅಂಥ ಜನರು ಈಗ ಕಾಣುತ್ತಿಲ್ಲವೆಂದರೆ ನಿಮಗೆ ಆ ಪ್ರಶ್ನೆನೇ ಇಲ್ಲವಲ್ಲ.

ಶ್ರೀ ಸಿ. ಬೈರೇಗೌಡ:- ನಮ್ಮ ಪ್ರಿವಿಲೇಜ್ ಪ್ರಶ್ನೆ ಇಲ್ಲಿ ಬರುತ್ತದೆ.

(ಗೊಂದಲ)

ಅಧ್ಯಕ್ಷರು :- ಶಿವರಾಮೇಗೌಡರೇ, ಮುಂದಿನ ಅಧಿವೇಶನದಲ್ಲಿ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ಕುಳಿತುಕೊಳ್ಳಿ..

"Speeches or writings containing vague charges against members of criticising their parliamentary conduct in a strong language particularly in the heat of a public controversy, without, however, imputing any malafides, are not treated by the House as a contempt of breach of privilege"

ಅಂತ ಒಂದು ಇದೆ. ಆದ್ದರಿಂದ....

SRI D.B. CHANDREGOWDA:- Even interpreting that way ಮುಖ್ಯ ಮಂತ್ರಿಗಳು ಮಾತನಾಡುವಾಗ ಭಾವೋದ್ರೇಕಕ್ಕೆ ಎಡೆಯೇ ಇರಲಿಲ್ಲ. There was no provocation. We sat like school children. ಏನೇನು ಹಣೆಪಟ್ಟಿ ಕಟ್ಟುತ್ತಾರೆ ಅದನ್ನೆಲ್ಲಾ ಕಟ್ಟಿಸಿಕೊಂಡು ಗಂಭೀರವಾಗಿ ಕುಳಿತುಕೇಳಬೇಕು.

ಅಧ್ಯಕ್ಷರು:- ಅವರು ವಾಪಸ್ಸು ತೆಗೆದುಕೊಳ್ಳುತ್ತೇನೆಂದು ಹೇಳಿದರೂ ಕೂಡ you are insisting on your privileges. I will give my ruling after looking into the records.

ಶ್ರೀ ಹೆಚ್. ಏಕಾಂತಯ್ಯ:- ಇದರ ಮೇಲೆ ನಾವು ಏನಾದರು ಹೇಳಲು ಅವಕಾಶ ಇದೆಯೇ?

ಅಧ್ಯಕ್ಷರು:- ಇಲ್ಲ, ನೀವು ಹೇಳಿದ್ದನ್ನೆಲ್ಲಾ ನಾನು ಕೇಳಿದ್ದೇನೆ. ನಾನು ರೆಕಾರ್ಡ್ಸ್ ತರಿಸಿ ನೋಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:- ನಾನು ಇನ್ನೂ ಹೇಳುವುದು ಇದೆ. ಮಧ್ಯದಲ್ಲಿ ಅವರು ಅಡ್ಡಿಪಡಿಸಿದರು; ಅದಕ್ಕೆ ಕುಳಿತೆ; ಈಗ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆಂಬ ಬಗ್ಗೆ ಕೆಲವು ಭಾಗವನ್ನು ಓದಿ ಹೇಳಿದರಿ. ತದನಂತರದ ಒಂದು ಮಾತನ್ನು ನಾನು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಪಕ್ಷನಾನು ಹೇಳಿದ್ದರೂ, ಅದನ್ನು ವಾಪಸ್ಸು ತೆಗೆದುಕೊಂಡಿದ್ದೇನೆ ಎಂಬ ಮಾತನ್ನು ಹೇಳಿದ ಮೇಲೂ ಇದು ಹಕ್ಕುಚ್ಯುತಿ ಆಗುತ್ತದೆಯೇ ಇಲ್ಲವೇ ಎಂಬ ಮಾತನ್ನು ಹೇಳಿದಿರಿ. ಖಂಡಿತವಾಗಿ ಇದು ಹಕ್ಕುಚ್ಯುತಿ ಆಗುತ್ತದೆಂದು ನನ್ನ ಅಭಿಪ್ರಾಯ. ನಾನು ಯಾವುದಾದರೂ ಒಂದು ಮಾತನ್ನು ಹೇಳಿ ಆ ಮಾತನ್ನು ವಾಪಸ್ಸು ತೆಗೆದುಕೊಂಡ ತಕ್ಷಣವೇ ಅದು ಹಕ್ಕುಚ್ಯುತಿ ಉಲ್ಲಂಘನೆ ಆಗುವುದಿಲ್ಲವೆಂದು ಹೇಳುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ನಾನು ನಿರ್ದಿಷ್ಟವಾದ ಆರೋಪ ಮಾಡಿ ಅಧನ್ನು ವಾಪಸ್ಸು ತೆಗೆದುಕೊಂಡಿದ್ದೇನೆಂದರೆ ಅದು ಹಕ್ಕುಚ್ಯುತಿ ಆಗುವುದಿಲ್ಲವೆಂಬ ಮಾತನ್ನು ಖಂಡಿತವಾಗಿ ಸಹ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಅವರ ಉದ್ದೇಶ ಅಲ್ಲಿಗೇ ನಿಲ್ಲಲಿಲ್ಲ. ಪುನಃ ಅವರ ಭಾಷಣವನ್ನು ಮುಂದುವರಿಸಿ ಏನು ಹೇಳಿದ್ದಾರೆಂಬುದನ್ನು ತಾವು ನೋಡಬಹುದು. ಕಾಂಗ್ರೆಸ್ ಸರ್ಕಾರ 1947ರಿಂದ 1983 ರವರೆಗೆ ಇತ್ತಲ್ಲ, ಆಗ ಎಷ್ಟು ಪ್ರಮಾಣದಲ್ಲಿ ಟ್ರಾನ್ಸ್‌ಫರ್‌ಗಳು ಆಗಿವೆ ಎಂದು ನಾನು ಕೇಳಿದೆ. ಅದಕ್ಕೆ ಉತ್ತರವಾಗಿ ವೀರೇಂದ್ರ ಪಾಟೀಲರು, ಅದನ್ನೆಲ್ಲ ಹೇಳೋಣ; ಅದನ್ನೆಲ್ಲಾ ಕೇಳಿ. ಆದರೆ ಪ್ರಚೋದನೆ ಮೂಡುವ ಪ್ರಶ್ನೆ ಇದಲ್ಲ ನಾನು ಏನು ಹೇಳಿದೆ, ಅದನ್ನು ಸ್ಪಷ್ಟವಾಗಿ ಹೇಳಿದೆ. ಶ್ರೀಮಾನ್ ಬೈರೇಗೌಡರು ಎಂದು ಕೇಳಿದಾಗ ಇದನ್ನು ನಾನು ಎಲ್ಲರ ಬಗ್ಗೆ ಹೇಳುತ್ತಿಲ್ಲವೆಂದು ಹೇಳಿದೆ. ನಾನು ಇದನ್ನೇ ಹೇಳುತ್ತಿದ್ದೇನೆ. ಆದರೆ ಕೆಲವು ಜನ ಇದನ್ನೇ ಉದ್ಯೋಗ ಮಾಡಿಕೊಂಡಿದ್ದರು ಎಂಬುದು ಗೊತ್ತಿದೆ ಎಂದರು. ತಾವು ಏನು ಹೇಳಿದಿರಿ; ಪುನಃ ನಾನು ವಾಪಸ್ಸು ತೆಗೆದುಕೊಂಡಿದ್ದೇನೆ ಎಂಬ ಮಾತನ್ನು ಹೇಳಿದ ಮೇಲೂಸಹ, ಇದೇ ಆರೋಪ ಅವರು ಮಾಡಿದ್ದಾರೆಂದರೆ ಇದರ ಉದ್ದೇಶ ಏನೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು? ಆದ್ದರಿಂದ ಇದು ಹಕ್ಕುಚ್ಯುತಿ ಪ್ರಶ್ನೆ ಆಗುತ್ತದೆ. ಇದನ್ನು ದಯಮಾಡಿ ತಾವು ಪರಿಶೀಲಿಸಿ ನಮಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ.

ಅಧ್ಯಕ್ಷರು:- ಆಗಲಿ.

ಶ್ರೀ ವಾಟಾಳ್ ನಾಗರಾಜ್:- ನಾನು ತಮಗೆ ಹಕ್ಕುಬಾಧ್ಯತಾ ಸೂಚನೆ ಕಳುಹಿಸಿದಾಗ ತಾವು ಇಲ್ಲಿ ಇದರ ಬಗ್ಗೆ ಒಂದು ತೀರ್ಪು ಕೊಡುತ್ತೇನೆಂದು ಹೇಳಿದ್ದೀರಿ. ಸದನ ಇವತ್ತು ಕೊನೆಯ ದಿವಸವೆಂದು ನನಗೆ ಅನ್ನಿಸುತ್ತದೆ. ಆದ್ದರಿಂದ ಯಾವಾಗ ತೀರ್ಪು ಕೊಡುತ್ತೀರಿ? ತಾವು ತೀರ್ಪು ಕೊಡುವುದಕ್ಕೆ ಮುಂಚೆ ಈ ಸಭೆಯಲ್ಲಿ ದೀರ್ಘವಾಗಿ ಚರ್ಚೆಗೆ ಅವಕಾಶ ಕೊಡುವುದು ಒಳ್ಳೆಯದು. ಏಕಾಏಕಿಯಾಗಿ ಬಹಳ ಗಹನವಾದ ವಿಚಾರವನ್ನು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಪತ್ರಿಕೆಗಳ ಮೇಲೆ ಹಕ್ಕುಚ್ಯುತಿ ತರಬೇಕೆಂದು ಹೇಳಿದ್ದಾರೆ. ಆಂದಾಗ ಈ ಗಹನವಾದ ವಿಚಾರದ ಬಗ್ಗೆ ಈ

ಸಭೆಯಲ್ಲಿ ಇನ್ನೂ ಹೆಚ್ಚಿನ ಚರ್ಚೆಗೆ ಅವಕಾಶ ಕೊಟ್ಟರೆ, ಅದರಿಂದ ಹೆಚ್ಚಿನ ಬೆಳಕನ್ನು ಚೆಲ್ಲಲು ಅವಕಾಶವಾಗುತ್ತದೆ ಮತ್ತು ತಮ್ಮ ತೀರ್ಪಿಗೆ ಹೆಚ್ಚು ಬೆಂಬಲ ಆಗುತ್ತದೆ. ಏಕೆಂದರೆ, ತಮ್ಮ ವ್ಯಾಪ್ತಿ ಎಷ್ಟು? ಮುಂದಿನ ವ್ಯಾಪ್ತಿ ತಮ್ಮಗೇ ಅಲ್ಲವೆ ಎಂಬುದು ಹೊರಗಡೆ ಕುಳಿತುಕೊಂಡು ಉಪಹಾರ ಮಾಡತಕ್ಕ ಸ್ಥಳ ಯಾವುದು? ತಮ್ಮ ಗಮನಕ್ಕೆ ಒಂದು ವಿಚಾರ ತರುವುದಾದರೆ, ಹಿಂದೆ ಹಿರಿಯ ಸದಸ್ಯರಾದ ಗೋಪಾಲಗೌಡರು ಈ ಸದನದಲ್ಲಿದ್ದಾಗ ಅವರು ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಈ ಸಭೇಯಲ್ಲಿ ತಳಿದು ಹೊರಗೆ ಹಾಕಿದಾಗ ಮಾನ್ಯ ಅಧ್ಯಕ್ಷರು ಏನು ಮಾಡಿದರು ಎಂದರೆ, ಈ ಸದನದೊಳಗೆ ಅಂದರೆ ಆ ಬಾಗಿಲಿನಿಂದ ಒಳಗೆ ಬರಬಾರದೆಂದು ಆಜ್ಞೆ ಮಾಡಿದ್ದರು. ಇಂಥ ಅನೇಕ ವಿಚಾರಗಳು ಬರುತ್ತವೆ. ಮುಖ್ಯ ಮಂತ್ರಿಗಳ ಮಾತನ್ನೇ ಗಮನಿಸುವುದಾದರೆ ಪತ್ರಿಕೆಗಳನ್ನು ಹಿಡಿದಿಟ್ಟ ಹಾಗೆ ಆಗುತ್ತದೆ. ನಾನು ಅವರ ಮಾತಿನ ಬಗ್ಗೆ ಹೇಳುತ್ತಿದ್ದೇನೆ. ತಾವು ಇದನ್ನು ಗಮನಿಸಿದ್ದೀರಾ?

ಅಧ್ಯಕ್ಷರು:– ಅವರು ಹೇಳಿದ್ದನ್ನು ಗಮನಿಸುತ್ತೇನೆ; ತಾವು ಹೇಳಿದ್ದನ್ನು ಗಮನಿಸುತ್ತೇನೆ; ಸದನದ ಯಾವ ಒಬ್ಬ ಸದಸ್ಯರು ಹೇಳಿದ್ದನ್ನು ಗಮನಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ತಮ್ಮ ಮಾತಿನ ಬಗ್ಗೆ ನನಗೆ ಗೌರವ ಇದೆ. ತಾವು ತೀರ್ಪು ಕೊಡುವುದಕ್ಕಿಂತ ಮುಂಚೆ ಈ ಪತ್ರಿಕೆಗಳ ಬಗ್ಗೆ ನಾವು ಮಾತನಾಡುವಾಗ ಅವರನ್ನು ಹಿಡಿದಿಡುವುದಕ್ಕಾಗುವುದಿಲ್ಲ. ಆ ರೀತಿಯ ವಾತಾವರಣ ತರುವುದಕ್ಕೆ ಹೋದರೆ, ಮತ್ತೊಂದು ಸಾರ್ವಿ ತುರ್ತುಪರಿಸ್ಥಿತಿ ಇದೆಲ್ಲಾ ಗಮನಕ್ಕೆ ಬರತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ತಾವು ತೀರ್ಪು ಕೊಡುವುದಕ್ಕಿಂತ ಮುಂಚೆ ಇನ್ನೊಂದು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಹೇಳುವುದು ಇನ್ನೂ ಅನೇಕ ವಿಚಾರಗಳಿರುವುದರಿಂದ ನಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:– ಶ್ರೀ ಲಕ್ಕಪ್ಪನವರು ನನ್ನ ಗಮನವನ್ನು ಬಹಳ ಕಾಲದಿಂದ ಸೆಳೆಯುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ:– ಅಧ್ಯಕ್ಷರೇ....

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಒಂದು ಮಾತನ್ನು ಹೇಳಿದ್ದಾರೆ. ಆ ಬಗ್ಗೆ ಒಂದು ಕರೆಕ್ಟ್ ಮಾಡಬೇಕಾಗಿದೆ. ವಾಟಾಳ್ ನಾಗರಾಜ್‌ರವರು ಹಕ್ಕುಚ್ಯುತಿ ಬಗ್ಗೆ ಏನು ಸೂಚನೆ ಕೊಟ್ಟಿದ್ದಾರೆ ಆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರ ಉದ್ದೇಶ ಏನೆಂದರೆ ಸದಸ್ಯರ ಹಕ್ಕನ್ನು ಸಂರಕ್ಷಣೆ ಮಾಡುವುದು ಪ್ರಾಮುಖ್ಯವಾದ ವಿಚಾರವಾಗುತ್ತದೆ ಎಂದು ಹೇಳಿದರು. ಆದರೆ ಮುಖ್ಯಮಂತ್ರಿಗಳ ಈ ವಾದವನ್ನು ತಾವು ಅಪಾರ್ಥ ಮಾಡಿಕೊಳ್ಳಬಾರದು. ಏಕೆಂದರೆ ಪತ್ರಿಕೆಗಳ ಮೇಲೆ ಏನೋ ಒಂದು ನಿರ್ಬಂಧ ತಮ್ಮಂತೆ ಮುಖ್ಯಮಂತ್ರಿಗಳು ಮಾಡಿದರೆ ತುರ್ತುಪರಿಸ್ಥಿತಿಯ ಪರಿಸ್ಥಿತಿ ಉಂಟಾಗುತ್ತದೆ ಎಂಬ ಸಂದೇಶ, ಭಾವನೆ ತಮ್ಮ ಮಾತಿನಲ್ಲಿ ದಯಮಾಡಿ ಬರಬಾರದು. ಏಕೆಂದರೆ ಅವರ ಉದ್ದೇಶವನ್ನು ಹಕ್ಕುಚ್ಯುತಿ ಸೂಚನೆಯಲ್ಲಿ ಯಾವಾಗ ಕೊಟ್ಟಿರಿ; ಅದರ ಬಗ್ಗೆ ತಮ್ಮ ಹಕ್ಕನ್ನು ಸಂರಕ್ಷಣೆ ಆಗುವುದಕ್ಕೆ, ಯಾವರೀತಿಯಲ್ಲಿ ನಾವು ಈ ಸದನದಲ್ಲಿ ನಡೆದುಕೊಳ್ಳಬೇಕಾಗುತ್ತದೆ, ಯಾವರೀತಿ ಪತ್ರಿಕೆಗಳು ನಡೆದುಕೊಳ್ಳಬೇಕಾಗುತ್ತದೆ ಎಂಬ ಬಗ್ಗೆ ವಿಚಾರ ಮಾಡಬೇಕು. ಏಕೆಂದರೆ ಪ್ರೊಸೀಡಿಂಗ್ಸ್ ಕಾಪಿ ಅವರಿಗೆ ತಕ್ಷಣ ಹೋಗುವುದಿಲ್ಲ. ನಾವು ಸೀಟಿನಲ್ಲಿ ಕುಳಿತುಕೊಂಡು ಮಾತನಾಡಬಹುದು. ಆಗ ಅವರು ಏನು ಕೇಳುತ್ತಾರೆ, ಏನು ಶ್ರವಣವಾಗುತ್ತದೆ...

ಶ್ರೀ ವಾಟಾಳ್ ನಾಗರಾಜ್:– ಅವರೂ ಕಿವಿಗೆ ಹಾಕಿಕೊಂಡಿರುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಹಾಗಲ್ಲ. ವಾಟಾಳ್ ನಾಗರಾಜ್ ಅವರು ಏನು ಹೇಳಿದ್ದಾರೆ ಎಂದರೆ, ಮುಖ್ಯಮಂತ್ರಿಗಳು ಹೇಳಿದಹಾಗೆ ಮಾಡಿದರೆ ಪತ್ರಿಕೆಯವರಿಗೆ ನಿರ್ಬಂಧವಾಗುತ್ತದೆ, ತುರ್ತುಪರಿಸ್ಥಿತಿ ನೆನಪಾಗುತ್ತದೆ ಎಂದು ಹೇಳಿದಿರಿ. ಆದರೆ ಮುಖ್ಯಮಂತ್ರಿಗಳ ಅಭಿಪ್ರಾಯ ಅದಲ್ಲ. ಮುಖ್ಯಮಂತ್ರಿಗಳ ಇಚ್ಛೆ ಏನೆಂದರೆ ಸದನದ ಕಾರ್ಯಕಲಾಪ ನಡೆಯಬೇಕಾದರೆ, ಪತ್ರಿಕಾಕರ್ತರು ವರದಿ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಸಂಘರ್ಷಣೆ, ಅಪಾರ್ಥ ಆಗದಹಾಗೆ ಮಾಡಬೇಕು. ಸದಸ್ಯರ ಹಕ್ಕಿನ ಸಂರಕ್ಷಣೆ ಬಗ್ಗೆ ಅವರು ಹೇಳಿದರೇ ಹೊರತು ಯಾರಿಗೂ ಯಾವ ಪತ್ರಿಕೆಗಳಿಗೂ

ನಿರ್ಬಂಧ ಹಾಕಬೇಕು ಎಂಬ ಧ್ವನಿಯಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿಲ್ಲ ಎಂದು ಸನ್ಮಾನ್ಯ ಅಧ್ಯಕ್ಷರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಇದೇ ವಿಚಾರದಲ್ಲಿ.....

ಅಧ್ಯಕ್ಷರು:- ಶ್ರೀ ಲಕ್ಕಪ್ಪ...

ಶ್ರೀ ಕೆ. ಲಕ್ಕಪ್ಪ:- ಅಧ್ಯಕ್ಷರೇ....

ಅಧ್ಯಕ್ಷರು:- ನಿಮ್ಮದು ಇದೇ ವಿಚಾರವೇ ಅಥವಾ ಬೇರೆ ವಿಚಾರವೆ?

ಶ್ರೀ ಕೆ. ಲಕ್ಕಪ್ಪ:- ಬೇರೆ.

ಅಧ್ಯಕ್ಷರು:- ಬೇರೇನಾ? ನಾನು ಇದರ ಮೇಲೆ ಹೇಳುತ್ತಿರೇನೋ ಅಂದುಕೊಂಡಿದ್ದೆ. ನೀವು ಮಾತನಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದರೆ, ಸಭಾನಾಯಕರಾಗಿ ಅವರು ಜವಾಬ್ದಾರಿಯಿಂದ ಹೇಳಿರುತ್ತಾರೆ. ನಮ್ಮ ಉದ್ದೇಶ ಮುಖ್ಯಮಂತ್ರಿಗಳನ್ನು ತಪ್ಪಿಗೆ ಸಿಕ್ಕಿಸಿಬಿಡಬೇಕು ಎಂಬುದಲ್ಲ. ಆ ಉದ್ದೇಶ ನಮ್ಮದಲ್ಲ. ಹಾಗೆಯೇ ಹಕ್ಕುಚ್ಯುತಿಯನ್ನು ಸದಸ್ಯರ ವಿರುದ್ಧ ಕೊಡಬೇಕೋ ಪತ್ರಿಕೆಗಳ ವಿರುದ್ಧ ಕೊಡಬೇಕೋ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಆದರೆ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ ಪತ್ರಿಕೆಯವರು ಪ್ರಾಮಾಣಿಕವಾಗಿ ವರದಿ ಮಾಡಿದರೆ. Unless the Speaker takes a decision to direct them not to report; ಇದನ್ನು ಬರೆಯಬೇಡಿರಪ್ಪ ಎಂದು ಹೇಳುವವರೆಗೆ ಇಲ್ಲಿ ಏನು ನಡೆಯುತ್ತದೋ ಆದನ್ನು ಪ್ರಾಮಾಣಿಕವಾಗಿ ಬರೆದಿರುತ್ತಾರೆ. ಆದು ಹಕ್ಕುಚ್ಯುತಿ ಹೇಗಾಗುತ್ತದೆ? ಆ ಕಾರಣದಿಂದ ಇಲ್ಲಿ ನಡೆದಂಥ ಒಂದು ಪರಿಸ್ಥಿತಿಯನ್ನು ಸಾರಾಸಗಟಾಗಿ ವರದಿ ಮಾಡದೆ ಯಾವುದನ್ನು ಬೇಕೋ ಆದನ್ನು ವರದಿ ಮಾಡಿದ್ದಾರೆ. ಆದು ಅಧಿಕೃತ ಕಡತದಲ್ಲೂ ಇಲ್ಲ. ಆದರೆ ಅವರು ನಡೆದುದನ್ನು ವರದಿ ಮಾಡಿದ್ದಾರೆ. ಇದಕ್ಕೂ ಕೂಡ ಅವಕಾಶ ಇಲ್ಲವೆ? ಇಲ್ಲಿ ಏನು ನಡೆಯಿತು ಎಂಬ ಬಗ್ಗೆ ಪ್ರತಿಯೊಂದನ್ನೂ ಸ್ಪೀಕರ್ ಕೇಳೋ ಅಥವಾ ಮುಖ್ಯಮಂತ್ರಿಗಳ ಸಲಹೆ ಕೇಳೋ ವರದಿ ಮಾಡುವುದಕ್ಕಾಗುವುದಿಲ್ಲ. ತಮಗೆ ತಿಳಿದಿದ್ದನ್ನು ಮಾಡಿರುತ್ತಾರೆ. ಆ ಕಾರಣವೇ ಪತ್ರಿಕೆಯವರ ಮೇಲೆ ಇಲ್ಲಿ ಹಕ್ಕುಚ್ಯುತಿ ತರದೇ ಇರುವುದಕ್ಕೆ ಬಹಳ ಮುಖ್ಯವಾದ ಕಾರಣ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ವಾದವನ್ನು ಮಂಡಿಸುತ್ತಾ ಪತ್ರಿಕೆಯವರು ವಸ್ತುಸ್ಥಿತಿಯನ್ನು ರಿಪೋರ್ಟ್ ಮಾಡಬೇಕು. ಅವರಿಗೆ ಕೂಡ ಒಂದು ಸಂಯಮ ಇರಬೇಕು ಎಂದು ಹೇಳಿದರು. ಆದನ್ನು ನಾವು ಒಪ್ಪುತ್ತೇವೆ. ಈಗ ಪತ್ರಿಕೆಯವರು ಇಲ್ಲಿ ವರದಿ ಮಾಡಿರುವುದು ವಸ್ತುಸ್ಥಿತಿಯನ್ನು. ಆದು ಇಲ್ಲಿ ನಡೆದಿರುವುದೋ, ವೆಲ್‌ನಲ್ಲಿ ನಡೆದಿರುವುದೋ ಆದಲ್ಲ ಮುಖ್ಯ. ಇಲ್ಲಿ ನಡೆದಿರುವುದನ್ನು ವರದಿ ಮಾಡಿದ್ದಾರೆ. ಆ ಕಾರಣದಿಂದ ವಾಟಾಳ್ ನಾಗರಾಜ್ ಅವರು ಹಕ್ಕುಚ್ಯುತಿಯನ್ನು ಪತ್ರಿಕೆಯವರ ಮೇಲೆ ಬಿಟ್ಟು ಸದಸ್ಯರ ಮೇಲೆ ಏಕೆ ತಂದಿದ್ದಾರೆಂದರೆ ಸದಸ್ಯರು ಈ ಭಾಷೆ ಬಳಸಿದ್ದಾರೆಂದು. ಅದನ್ನು ಇಲ್ಲಿ ಹೇಳಿಬಿಟ್ಟಿದ್ದರೆ ಮುಗಿದು ಹೋಗುತ್ತಿತ್ತು. ಆದನ್ನು ಹೇಳುವುದರಲ್ಲಿ ತೊಂದರೆ ಏನಿತ್ತು? ಪತ್ರಿಕೆ ಮೇಲೆ ಏತಕ್ಕೆ ಪ್ರಶ್ನೆ?

ಅಧ್ಯಕ್ಷರು:- ನಾನು ನನ್ನ ರೂಲಿಂಗ್ ಅನ್ನು ರಿಸರ್ವ್ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು, ಸಭಾನಾಯಕರು ಪತ್ರಿಕೆಗಳ ಮೇಲೆ ಇದನ್ನು ಮಾಡಿ ಅಂತ ಹೇಳಲಿಲ್ಲ. ನಿನ್ನೆ ಅವರು ಸಾಮಾನ್ಯವಾಗಿ.....

ಅಧ್ಯಕ್ಷರು:- ಈಗ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಗಳು ಆ ಮಾತನ್ನು ಹೇಳಿಲ್ಲ ಅಂತ ಹೇಳಿದ್ದಾರೆ. ಖಂಡಿತವಾಗಿ ಹೇಳಿದ್ದಾರೆ. ನಾನು ಇಲ್ಲಿಗೆ ಉದ್ದೇಶಪೂರ್ವಕವಾಗಿ ಮಾನ್ಯ

ಮುಖ್ಯಮಂತ್ರಿಗಳ ಮೇಲೆ ಏನೊ ಸಿಕ್ಕಿಸಿದ್ದಾರೆ ಆದ್ದರಿಂದ ಹೇಳಬೇಕು ಅಂತ ಭಾವನೆ ಇಲ್ಲ. ನಿನ್ನೆ ಅವರು ಏನು ಹೇಳಿದರು ಅಂದರೆ, ನೇರವಾಗಿ ನಾನು....

ಅಧ್ಯಕ್ಷರು:– ನಿನ್ನೆ ಹೇಳಿದ್ದನ್ನೇ ಪುನಃ ಹೇಳಬೇಡಿ. ನಾನು ನನ್ನ ರೂಲಿಂಗನ್ನು ರಿಸರ್ವ್ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮಾಡಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಪತ್ರಿಕೆ ಮೇಲೆ ಪ್ರಿವಿಲೇಜ್ ಮೋಷನ್ ತೆಗೆದುಕೊಂಡು ಬನ್ನಿ ಅಂತ ಹೇಳಿದ್ದಾರೆ. ಪತ್ರಿಕೆಗಳಿಗೆ ಡೈರೆಕ್ಷನ್ ಕೊಡಬೇಕೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆ ಮಾತಿನ ಮೇಲೆ ಏನು ಅರ್ಥ ಬರುತ್ತದೆ?

(ಗೊಂದಲ)

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯ ಬಗ್ಗೆ ನಾವು ಚರ್ಚೆ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂಬುದು ಕಾರ್ಯಕಲಾಪಗಳ ವರದಿಯಲ್ಲಿದೆ. ಅದನ್ನೂ ನಾನು ನೋಡುತ್ತೇನೆ. ಅವರು ಹೇಳಿದ್ದನ್ನೂ ನೋಡುತ್ತೇನೆ. ತಾವೂ ಯಾವುದನ್ನು ಕಳುಹಿಸಿದ್ದೀರಾ ಅದನ್ನು ನೋಡುತ್ತೇನೆ. ನಿಮ್ಮ ಹಕ್ಕುಬಾದ್ಯತೆ ಸೂಚನೆಯ ಮೇಲೆ ನಾನು ನನ್ನ ತೀರ್ಮಾನವನ್ನು ತಡೆಹಿಡಿದಿದ್ದೇನೆ. ಅದನ್ನು ಕೊಡುತ್ತೇನೆ ನಾನು. ಸಮಗ್ರವಾಗಿ ಎಲ್ಲ ವಿಚಾರಗಳನ್ನು ಗಮನಿಸಿ, ಪಾರ್ಲಿಮೆಂಟ್ ಪ್ರಿವಿಲೇಜಸನ್ನು ನೋಡಿ, ಡೈಜೆಸ್ಟೆಡ್ ಕೇಸಸ್, ಪ್ರಿಸಿಡೆಂಟ್ಸ್ ಇದನ್ನೆಲ್ಲಾ ನೋಡಿ ನಾನು ಕೊಡಬೇಕಾಗುತ್ತದೆ. ಅದಕ್ಕಾಗಿ ನನಗೆ ಸ್ವಲ್ಪ ಕಾಲಾವಕಾಶ ಬೇಕು.

ಶ್ರೀ ವಾಟಾಳ್ ನಾಗರಾಜ್:– ಸಮಯ ತೆಗೆದುಕೊಳ್ಳಿ, ತಮಗೆ ಯಾವಾಗಲಾದರು ತೀರ್ಮಾನ ಕೊಡುವುದಕ್ಕೆ ಹಕ್ಕು ಇದೆ. ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ತಮ್ಮ ತೀರ್ಪನ್ನು ಕೊಡುವುದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಅದಕ್ಕಿಂತ ಮುಂಚಿತವಾಗಿ ಪೂರಕವಾಗಿ ಸ್ವಲ್ಪ ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ....

(ಗೊಂದಲ)

ಶ್ರೀ ಜಿ. ರಾಮಕೃಷ್ಣ:– ಎಷ್ಟು ಸಲ ಹೇಳುವುದು? ಹೇಳಿದ್ದನ್ನೇ ಹೇಳುವುದಕ್ಕೆ ತಾವು ಅವರಿಗೆ ಎಷ್ಟು ಸಲ ಟೈಮು ಕೊಡುತ್ತೀರಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನನಗೆ ನೋವಾಗಿದೆ. ನನಗೆ ಆ ಪದ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿ ನೋವಾಗಿದೆ.

ಅಧ್ಯಕ್ಷರು:– ನಿಮಗೆ ನೋವಾಗಿದೆ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಆದ್ದರಿಂದ ಪತ್ರಿಕೆಗಳಲ್ಲಿ ಅದು ಬಂದಿರುವುದರಿಂದ ಇಲ್ಲಿ ಪ್ರಸ್ತಾಪ ಮಾಡಬೇಕೇ ಹೊರತು, ಇಲ್ಲದಿದ್ದರೆ ಆ ಪ್ರಶ್ನೆ ಬರುತ್ತಿರಲಿಲ್ಲ. ತೆರೆಯ ಮರೆಯಲ್ಲಿ ತಮ್ಮ ಛೇಂಬರ್‌ನಲ್ಲಿ ಏನು ನಡೆಯಿತು ಎಂಬ ವಿಚಾರ ಬೇರೆ. ಆ ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಹೇಳತಕ್ಕ ಪ್ರಸಂಗ ಅಲ್ಲ.

ಅಧ್ಯಕ್ಷರು:– ತೆರೆಯ ಮರೆಯಲ್ಲಿ ಏನು ನಡೆಯಿತು ಎಂಬುದರ ಬಗ್ಗೆ ನಿಮಗೆ ಸಮಾಧಾನವಾಗಿದೆಯೇ? ಹೌದೋ ಇಲ್ಲವೋ ಎಂದು ಹೇಳಿ;

ಶ್ರೀ ವಾಟಾಳ್ ನಾಗರಾಜ್:– ಸಮಾಧಾನವಾಗಿದೆ.

ಅಧ್ಯಕ್ಷರು:– ಸರಿ. ಆದರೆ...

ಶ್ರೀ ವಾಟಾಳ್ ನಾಗರಾಜ್:– ಇನ್ನೊಂದು ಮಾತು. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಅದನ್ನು ಸಭೆಯ ಗಮನಕ್ಕೆ ತರಲೇ ಇಲ್ಲ. ಮತ್ತೆ ಮುಖ್ಯಮಂತ್ರಿಗಳು ಎಲ್ಲಿ ಹೇಳಿದ್ದಾರೆ

ಅವರು ಹೇಳಿಯೇ ಇಲ್ಲ ಅಂತ ಇವರು ಹೇಳುತ್ತಿದ್ದಾರೆ. ಹೇಳಿಲ್ಲ ಅಂದರೆ ನೀವು ಏನು ಮಾಡುತ್ತೀರಿ? ಈ ಮಾತನ್ನು ಜವಾಬ್ದಾರಿ ಸ್ಥಾನದಲ್ಲಿರತಕ್ಕ ಮಾನ್ಯಮಂತ್ರಿಗಳು ಹೇಳಿದರೆ...

(ಗೊಂದಲ)

ಅಧ್ಯಕ್ಷರು:- ಅದನ್ನೂ ಗಮನಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅದಕ್ಕಾಗಿ ತಮಗೆ ಹೇಳುತ್ತಿದ್ದೇನೆ. ಯಾವ ಸದಸ್ಯರು ನನ್ನ ಹಕ್ಕಿಗೆ ಚ್ಯುತಿ ಬರತಕ್ಕ, ನನ್ನ ಗೌರವಕ್ಕೆ ಅಗೌರವ ತರತಕ್ಕ ಮಾತುಗಳನ್ನಾಡಿದ್ದರಿಂದ ಅದು ಪತ್ರಿಕೆಗಳಲ್ಲಿ ಬಂತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಹಕ್ಕು ಚ್ಯುತಿ ನಿರ್ಣಯವನ್ನು ಸದಸ್ಯರ ಮೇಲೆ ತರಬೇಡಿ. ಪತ್ರಿಕೆಗಳ ಮೇಲೆ ತೆಗೆದುಕೊಂಡು ಬನ್ನಿ ಅಂತ ಏನು ಅವರು ಹೇಳಿದ್ದಾರೆ. ಅದು ಸರಿಯಲ್ಲ. ಆ ವಾದ ಸರಿಯಲ್ಲ. ಅದಕ್ಕೆ ತಾವು ತೀರ್ಪು ಕೊಡುವುದಕ್ಕಿಂತ ಮುಂಚಿತವಾಗಿ, ದಯಮಾಡಿ ಈ ಪತ್ರಿಕಾ ಸ್ವಾತಂತ್ರ್ಯ ಹರಣ, ಪತ್ರಿಕಾ ಸ್ವಾತಂತ್ರ್ಯದ ಹರಣ ಈ ಸಭೆಯಲ್ಲಿ ಆಗಬಾರದು; ಎನ್ನುವುದರ ಬಗ್ಗೆ ನಾವು ಮಾತನಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ಯಾವ ಪತ್ರಿಕಾ ಸ್ವಾತಂತ್ರ್ಯ ಹರಣ ಕೂಡ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಆಗಬಾರದು ಎನ್ನುವುದರ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ನಾವು ಸರ್ಕಾರದ ಪರವಾಗಿ ಒಂದು ವಿಚಾರವನ್ನು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಈ ಸದನದಲ್ಲಿ ಸದನದ ಕೆಲವು ಪರಂಪರೆಗಳಿಗನುಗುಣವಾಗಿ ಸದನ ನಡೆಯಬೇಕೆಂಬುದು ನಮ್ಮ ಇಚ್ಛೆ. ಇದರಲ್ಲಿ ನಾವು ಪತ್ರಿಕಾ ಸ್ವಾತಂತ್ರ್ಯ ಹರಣ ಮಾಡತಕ್ಕ ಪ್ರಶ್ನೆಯೇ ಇಲ್ಲ. ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕೆಂಬ ಉದ್ದೇಶ ತಮಗೆ ಎಷ್ಟು ಇದೆಯೋ ಅದರ 100 ಪಟ್ಟು ಹೆಚ್ಚು ನಮಗೂ ಇದೆ. ನಮಗೆ ಮುಖ್ಯಮಂತ್ರಿಗಳಿಗಿದೆ. ನಮ್ಮ ಸರ್ಕಾರಕ್ಕೆ ಇದೆ. ಆದುದರಿಂದ ಈ ಬಗ್ಗೆ ತಾವು ಬರೀ ಮಾತಿನಿಂದ ಚಾಕಿನಿಂದ ಈ ಮಾತನ್ನು ಹೇಳಿ ಅವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬೇಕೆಂದು ಇದರಲ್ಲಿ ರಾಜಕೀಯ ಬೆರೆಸಬೇಕೆಂದಿದ್ದರೆ.

11.50. ಎ.ಎಂ.

(ಗೊಂದಲ)

ಶ್ರೀ ಪಿ.ಜಿ.ಆರ್ ಸಿಂಧ್ಯ:- ಮಾನ್ಯ ಅಧ್ಯಕರೇ, ತಾವು ಈ ವಿಷಯದ ಬಗ್ಗೆ ತಮ್ಮ ರೂಲಿಂಗ್ ಅನ್ನು ರಿಜರ್ವ್ ಮಾಡಿದ್ದೀರಾ? ತೀರ್ಪನ್ನು ಕೊಡುತ್ತೇವೆಂದು ಹೇಳಿದ್ದೀರಾ? ಅದಕ್ಕೆ ಮುಂಚೆ ನಮ್ಮೆಲ್ಲರ ರಕ್ಷಕರಾಗಿರತಕ್ಕ ನಿಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತರುವುದಕ್ಕೆ ಬಯಸುತ್ತೇವೆ. ಹೊಸದಾಗಿ ಬಂದಿರುವವರು ನಮಗೆ ಪಾಠ ಹೇಳಿಕೊಡವುದು ಬೇಕಾಗಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಲಕ್ಕಪ್ಪನವರಂತಹ ಹಿರಿಯ ಸದಸ್ಯರು....

(ಗೊಂದಲ)

ಶ್ರೀ ವಿನಯಕುಮಾರ್ ಸೊರಕೆ:- ನಿಮ್ಮಿಂದ ಪಾಠ ಕಲಿಯಬೇಕಾದ್ದು ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಶಿವರಾಮೇಗೌಡರಿಂದ ನಾನು ಪಾಠ ಕಲಿಯುವುದು ಏನೂ ಇಲ್ಲ. ಇವರಿಂದ ಸಂಸದೀಯ ವ್ಯವಹಾರಗಳ ಬಗ್ಗೆ ನಾನು ಪಾಠ ಕಲಿಯುವುದು ಏನೂ ಸಹ ಇಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಲಕ್ಕಪ್ಪನವರು ಬೇಕಾದರೆ ಹೇಳಿಕೊಡಲಿ, ನಾನು ಕಲಿಯಲಿಕ್ಕೆ ತಯಾರಿದ್ದೇನೆ. ಇವತ್ತು ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮಾತನಾಡತಕ್ಕ ಸಂದರ್ಭದಲ್ಲಿ ನಾವೇನೋ ಇದಕ್ಕೆ ರಾಜಕೀಯ ಬೆರೆಸುವುದಕ್ಕೆ ಹೊರಟಿದ್ದೇವೆ; ಏನೋ ಮಿಸ್ಚೀಫ್ ಮಾಡಿದ್ದಾರೆಂದು ಹೇಳಿದ್ದಾರೆ. ಮಿಸ್ಚೀಫ್ ಎಂಬ ಪದವನ್ನು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಉಪಯೋಗಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ....

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ನಿಮಗೆ ಈಲ್ಡ್ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ಆಯಿತು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:– ಸಂಸದೀಯ ವ್ಯವಹಾರಗಳ ಮಂತ್ರಿಗಳು ನಾನು ಒಬ್ಬ ಜವಾಬ್ದಾರಿ ಸ್ಥಾನದಲ್ಲಿರತಕ್ಕವನು ನಿಂತು ಕೊಂಡು ಮಾಡನಾಡಬೇಕೆಂದು ಹೇಳಿದಾಗ ಇವರು ಒಂದು ಸಲವು ಈಲ್ಡ್ ಆಗುವುದಕ್ಕೆ ತಯಾರಿಲ್ಲ. ಇವರು ನಮಗೆ ಪಾಠ ಹೇಳಿಕೊಡುವುದಕ್ಕೆ ಬಂದಿದ್ದಾರೆ. ನೀವು ಡೊಲು ಹೊಡೆಯುವುದಕ್ಕೆ ಬಂದಿದ್ದೀರಿ, ಡೋಲನ್ನು ಹೊಡೆದುಕೊಳ್ಳಿ. ಡೊಲು ಹೊಡೆಯುವುದಕ್ಕೆ ಬಂದಿರುವ ಜನ ನೀವು ನಿಮ್ಮ ಕಡೆ ನಾನು ನೋಡುವುದೂ ಇಲ್ಲ.

(ಭಾರೀ ಗೊಂದಲ)

ಅಧ್ಯಕ್ಷರು:– ಅವರು ಏನು ಹೇಳುತ್ತಾರೆಂಬುದನ್ನು ಕೇಳಿ.

(ಭಾರೀ ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:– ಅವರು ಏನು ಹೇಳುತ್ತಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ನಾನು ಅವರಿಗೆ ಬೇಕಾದರೆ ಈಲ್ಡ್ ಆಗುವುದಕ್ಕೆ ತಯಾರಾಗಿದ್ದೇನೆ. ಏನಾದರೂ ಹೇಳಬೇಕೆಂದಿದ್ದರೆ ಒಬ್ಬೊಬ್ಬರು ಎದ್ದು ನಿಂತು ಹೇಳಲಿ, ಆಗ ತಾವೂ ಕೇಳಬಹದು, ನಾನು ಕೇಳಬಹುದು. ನಂತರ ಅವರು ಎತ್ತಿರತಕ್ಕ ಪ್ರಶ್ನೆಗಳಿಗೆ ಉತ್ತರ ಕೊಡಬಹುದು. ಎಲ್ಲರೂ ಹೀಗೆ ಒಟ್ಟಿಗೆ ನಿಂತು ಮಾತನಾಡಿದರೆ ಹೇಗೆ ಆಗುತ್ತದೆ. ನಾನು ಈಲ್ಡ್ ಆಗುತ್ತೇನೆ ಕುಶಾಲರವರಿಗೆ ಹೇಳುವುದಕ್ಕೆ ಅವಕಾಶ ಕೊಡಿ ಸ್ವಾಮಿ.

ಶ್ರೀ ಕೆ. ಕುಶಾಲ್:– ನೀವು ಏನು ಮಾಡುತ್ತೀರಿ, ನೋಡೋಣ. ನೀವು ನಮಗೆ ಪಾಠ ಹೇಳಬೇಕಾಗಿಲ್ಲ. ನಿಮ್ಮಿಂದ ನಾವು ಪಾಠ ಕಲಿಯಬೇಕಾಗಿಲ್ಲ.

ಅಧ್ಯಕ್ಷರು:– ನೀವು ಅವರಿಗೆ ಪಾಠ ಹೇಳಬೇಕಾಗಿಲ್ಲ; ಮುಂದುವರೆಸಿ.

† ಶ್ರೀ ಪಿ.ಜಿ.ಆರ್.ಸಿಂಧ್ಯ:– ಈಗ ಇರತಕ್ಕ ವಿಚಾರವೇನೆಂದರೆ, ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಈ ಸದನದಲ್ಲಿ ಒಬ್ಬ ಸದಸ್ಯರು ಉಪಯೋಗಿಸತಕ್ಕ ಒಂದು ವಾಕ್ಯದ ಬಗ್ಗೆ ಅಥವಾ ಕೆಲವು ಶಬ್ದಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿರತಕ್ಕದ್ದು; ಅದನ್ನು ಬೇಕಾದರೆ ಪತ್ರಿಕೆಯವರಿಗೆ ಸಂಯಮ ಇರಬೇಕೆನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಸಭಾನಾಯಕರಾಗಿ ಹೇಳಿರತಕ್ಕದ್ದು ನಿಜ, ಅದು ರೆಕಾರ್ಡ್‌ನಲ್ಲೂ ಇದೆ. ಇನ್ನು ಎರಡನೆಯದಾಗಿ ಹಾಗಾದರೆ ಈ ಸದನದಲ್ಲಿ ಆಗತಕ್ಕ ಎಲ್ಲಾ ವ್ಯವಹಾರಗಳು ಅಂದರೆ ಮಾತನ್ನು ಅವರು ಅಕ್ಷರಗಳಲ್ಲಿ ಬರೆಯಬಹುದು. ನೀವು ವರದಿಯನ್ನು ಮಾಡಬಹುದು. ಇಲ್ಲಿ ಕೈಕೈಮಿಲಾಯಿಸಿದ್ದೇವೆಂದು ಬರೆದಿದ್ದಾರೆ. ಅದರಲ್ಲಿ ಏನು ತಪ್ಪಿದೆ? ಹಾಗಾದರೆ ನಾವು ಒಂದು ಕೆಲಸ ಮಾಡಬಹುದು. ಏನೆಂದರೆ ಇಲ್ಲಿ ಏನು ಪ್ರೊಸೀಡಿಂಗ್ಸ್ ನಡೆಯುತ್ತದೆ. ಆಗ ಎಲ್ಲಾ ಪ್ರೊಸೀಡಿಂಗ್ಸ್ ಅನ್ನು ಸಹಿತ ಸಾಯಂಕಾಲ ಯಾರಾದರು ಒಬ್ಬರು ಕುಳಿತುಕೊಂಡು ಬ್ರೀಫ್ ಮಾಡಬಹುದು; ನೋಡಿ ಹೀಗೆ ನಡೆದಿದೆ. ಇಷ್ಟನ್ನು ವರದಿ ಮಾಡಿ ಎಂದು; ಅವರು ಪಾಪ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇಲ್ಲಿ ಬಂದು ಕುಳಿತುಕೊಂಡು ವರದಿ ಮಾಡುವುದು ಸಹ ತಪ್ಪುತ್ತದೆ. ಕೆಲವು ಸಂದರ್ಭದಲ್ಲಿ ಈ ಸದನದ್ದು ಅಷ್ಟೇ ಅಲ್ಲ, ಇದರ ಹೊರಗಡೆ ಇರತಕ್ಕ ಲಾಬಿಯಲ್ಲಿ ನಡೆಯತಕ್ಕ ವ್ಯವಹಾರಗಳು ಸಹಿತ ತಮ್ಮ ಕಸ್ಟಡಿಗೆ ಬರುತ್ತದೆ. ಆದರ ಬಗ್ಗೇನೂ ರಿಪೋರ್ಟ್ ಮಾಡಬೇಕೇ ಬೇಡವೇ ಎನ್ನುವ ಪ್ರಶ್ನೆ ಬರುತ್ತದೆ. ಇಲ್ಲಿ ನಡೆಯುತಕ್ಕದ್ದು ಸಹ ತಮ್ಮ ವ್ಯಾಪ್ತಿಯಲ್ಲಿ ಬರುತ್ತದೆನ್ನತಕ್ಕದ್ದು ನನ್ನ ಅಭಿಪ್ರಾಯ. ಇಲ್ಲಿ ನಡೆಯತಕ್ಕ ವ್ಯವಹಾರಗಳು ಹಾಗಾದ್ರೆ ಯಾವುದು ರೆಕಾರ್ಡ್ ಆಗೋದಿಲ್ಲ ಅದನ್ನು ಅವರು ಬರೆಯಬಾರ್ದಾ? ಇದೂ ಬರುತ್ತದೆ. ಇದು ಆದಮೇಲೆ ಕಳೆದ 15 ನಿಮಿಷಗಳ ಹಿಂದೆ ಇಲ್ಲಿ ತಾವು ಮಾತನಾಡತಕ್ಕ ಸಂದರ್ಭದಲ್ಲಿ ಕರ್‌ಕ್ಟೆಡ್ ವರ್ಷನ್, ಅನ್‌ಕರ್‌ಕ್ಟೆಡ್ ವರ್ಷನ್ ಬಗ್ಗೆ ಕೂಡಾ ಮಾತನಾಡಿದ್ದೇವೆ.

ನಾನು ಒಂದು ಉದಾಹರಣೆ ಹೇಳುತ್ತೇವೆ. ತಾವು ಯಾವುದೋ ಒಂದು ವಿಚಾರದ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಎಕ್ಸಪಂಜ್ ಮಾಡಿದ್ದೀರಿ. ಅದು ಯಾವುದು ಎಕ್ಸ್‌ಪಂಜ್ ಮಾಡುತ್ತೀರಾ ಎನ್ನುವುದು ಸ್ಪೆಸಿಫಿಕ್ಕಾಗಿ ಹೇಳದೇ ಇರತಕ್ಕ ಸಂದರ್ಭದಲ್ಲಿ ಏನಾಗುತ್ತದೆಂದರೆ, ಅವರು ರಿಪೋರ್ಟ್‌ನ್ನು ಮಾಡಲೇಬೇಕಾಗುತ್ತದೆ. ಈಗ ಮಾನ್ಯ ಬಸವಲಿಂಗಪ್ಪನವರು ಇದ್ದಾರೆ. ಯಾವುದೋ ಹೈಕೋರ್ಟ್ ವಿಚಾರದಲ್ಲಿ ನಮಗೂ ಅವರಿಗೂ ಚರ್ಚೆ ನಡೆಯಿತು. ತಾವು ಎಕ್ಸ್‌ಪಂಜ್ ಮಾಡಿದಿರಿ. ಯಾವ ಪೋರ್ಷನ್ ಎಕ್ಸ್‌ಪಂಜ್ ಮಾಡಿದಿರಿ? ಈಗ ಅವರು ಯಾರನ್ನು ಬಂದು ಕೇಳಬೇಕಾಗುತ್ತದೆ? ಆದುದರಿಂದ ನನ್ನ ವಿನಂತಿ ಏನೆಂದರೆ, ಈಗ ಇದು ಪತ್ರಿಕಾ ಸ್ವಾತಂತ್ರ್ಯಕ್ಕೇ ಹಗರಣ ನೀವು ತಂದುಬಿಟ್ಟಿದ್ದೀರಿ, ಏನೋ ಮುಖ್ಯಮಂತ್ರಿಗಳನ್ನು ಇದರಲ್ಲಿ ಸಿಕ್ಕಿಸಿಕೊಟ್ಟು ಅವರು ದೊಡ್ಡ ತಪ್ಪು ಮಾಡಿದ್ದಾರೆ, ಆದರಿಂದ ಏನೋ ಒಂದಿಷ್ಟು ಪ್ರಚಾರ ಪಡೆಯಬೇಕು ಎನ್ನುವ ಉದ್ದೇಶ ನಮ್ಮದು ಯಾರದೂ ಇಲ್ಲ. ನಾವು ಏನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದರೆ, ಈ ಸದನದಲ್ಲಿ ಏನು ನಡೆದರೂ ಕೂಡಾ, ಇದು ಏಕೆ ಬಂತು? ವಾಟಾಳ್ ನಾಗರಾಜ್ ಅವರು ಏನೋ....ಪಾಡಿಗೋಸ್ಕರ ಇದನ್ನೆಲ್ಲಾ ಮಡುತ್ತಿದ್ದಾರೆಂದು ಹೇಳಿ ರಾಜ್ಯದ ಜನರ ಬಗ್ಗೆ ಇವತ್ತು ವಾಟಾಳ್ ನಾಗರಾಜ್ ಅವರ ಮೇಲೆ ಬರುತ್ತದೆ, ನಾಳೆ ನನ್ನ ಮೇಲೆ ಬರುತ್ತದೆ, ನಾಳಿದ್ದು ಅವರ ಮೇಲೆ ಬರುತ್ತದೆ. ಹೀಗೆ ಬಂದಾಗ ನಾವು ಏನು ಮಾಡಬೇಕು? ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಶಾಸಕರುಗಳು ಹೋದ ಸಂದರ್ಭದಲ್ಲಿ ಏನು ಮಾಡಿದರು, ವ್ಯವಹಾರ ಮಾಡಿದರು, ಹಾಗೆ ಮಾಡಿದರು, ಹೀಗೆ ಮಾಡಿದರು, ಮುಖ್ಯಮಂತ್ರಿಗಳು ಮಾಡಿರತಕ್ಕ ಭಾಷಣದ ಬಗ್ಗೆ ಚರ್ಚೆ ಮಾಡಿದ ಮೇಲೆ ಆ ವಿಚಾರದ ಬಗ್ಗೆ ಕೂಡಾ ತಾವು ರೂಲಿಂಗ್. ರಿಸರ್ವ್ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ಡ್ಯಾಮೇಜ್ ಏನು ಆಗಬೇಕೋ, ಅದು ಆಗಿ ಹೋಗಿದೆ. ಏನು ನಮ್ಮನ್ನು ಡ್ಯಾಮೇಜ್ ಮಾಡಬಹುದೋ ಅದು ಪತ್ರಿಕೆಯಲ್ಲಿ ಪರದಿಯಾಗಿದೆ. ನಿಮ್ಮ ಉದ್ದೇಶ ಈಡೇರಿದೆ. ಈಗ ಅವರು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆಂದು ಹೇಳಬಹುದು. ಆದರೆ ತಮ್ಮ ರೂಲಿಂಗ್ ಬಹಳ ಮುಖ್ಯವಾಗಿರತಕ್ಕದ್ದು. ಆದರೆ ರೂಲಿಂಗ್ ಯಾವ ರೀತಿ ಇರಬೇಕೆಂದು ಹೇಳುವುದು. ನಾವು ಅಲ್ಲಿ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ತಾವು ದಯಮಾಡಿ ಗಮನದಲ್ಲಿಟ್ಟುಕೊಳ್ಳಿ. ಈ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಈ ಸದನದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಏನು ತಮ್ಮ ಹಕ್ಕಿಗೆ ಚ್ಯುತಿಯಾಗಿದೆಯೆಂದು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ಅದನ್ನು ಎತ್ತಿಹಿಡಿಯಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಕೊನೆಯದಾಗಿ ನಾನು ಒಂದು ಮಾತು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:- ಈ ಸದನದ ಮಾನ್ಯ ಸದಸ್ಯರೊಬ್ಬರು ಗ್ಯಾಲರಿಯಲ್ಲಿ ಹೋಗಿ ಕೂತಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಅವರ ಕ್ಷೇತ್ರದ ಜನತೆ ಅವರನ್ನು ಚುನಾಯಿಸಿ ಕಳುಹಿಸುವುದು ಈ ಸದನದ ಒಳಗೆ ಕುಳಿತುಕೊಳ್ಳಬೇಕೆಂದು. ಅವರು ಪ್ರೇಕ್ಷಕರಾಗಿ ಹೋಗಿ ಕುಳಿತುಕೊಳ್ಳುವುದಕ್ಕಲ್ಲ.

(ಅವರ ಹೆಸರನ್ನು ಹೇಳಬೇಕೆಂದು ಅನೇಕ ಸದಸ್ಯರು ಒತ್ತಾಯಿಸಿದರು)

ಶ್ರೀ ವಾಟಾಳ್ ನಾಗರಾಜ್:- ನಾನು ಒಂದು ವಿಷಯ ಹೇಳುತ್ತೇನೆ.

(ಗೊಂದಲ)

ಮುಖ್ಯಮಂತ್ರಿಗಳು ಏನೋ ಹೇಳಿದರು ಎಂದು ಹೇಳಿ ನಾನು ಅದನ್ನು ಸ್ವಾರ್ಥಕ್ಕೆ ಉಪಯೋಗ ಮಾಡಿಕೊಳ್ಳಬೇಕೆಂದು ಹೊರಟಿಲ್ಲ. ನಾನು ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ..

(ಗೊಂದಲ)

ಪತ್ರಿಕಾಕರ್ತರನ್ನು ನಾವು ಪಹಿಸಿಕೊಳ್ಳತಕ್ಕ ವಿಚಾರಕ್ಕೆ ಹೋಗಿಲ್ಲ. ಒಂದು ಮಾತನ್ನು ಹೇಳುತ್ತೇನೆ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕ ಪದವನ್ನು...

(ಗೊಂದಲ)

ಅಧ್ಯಕ್ಷರು:- ನಾನು ಕೇಳುವುದಿಲ್ಲ. ನೀವು ಹೇಳುವುದನ್ನು ನಾನು ಬೇಕಾದಷ್ಟು ಸಾರಿ ಕೇಳಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸ್ವಲ್ಪ ತಾಪು ಕೇಳಿ ಸ್ವಾಮಿ.

ಅಧ್ಯಕ್ಷರು:- ದಯವಿಟ್ಟು ತಾವುಗಳೆಲ್ಲರೂ ಕುಳಿತುಕೊಳ್ಳಬೇಕು. ಆರ್ಡರ್, ಆರ್ಡರ್.

(ಗೊಂದಲ)

ಅಧ್ಯಕ್ಷರು:- ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದು, ವಿರೋಧಪಕ್ಷದ ಉಪನಾಯಕರು ಹೇಳಿದ್ದು ಎಲ್ಲವನ್ನು ಕೇಳಿದ್ದೇನೆ. ಇದು ಬಹಳ ಗಹನವಾದ ವಿಚಾರಗಳನ್ನು ಒಳಗೊಂಡಿರತಕ್ಕ ಪ್ರಶ್ನೆ. ಆದ್ದರಿಂದ ನಾನು ಸುಲಭವಾಗಿ ಒಂದು ರೂಲಿಂಗ್ ಕೊಡುವುದಕ್ಕೆ ಆಗುವುದಿಲ್ಲ. ಇದನ್ನೆಲ್ಲಾ ಅಧ್ಯಯನ ಮಾಡಿ ಅನಂತರ ರೂಲಿಂಗ್ ಕೊಡುತ್ತೇನೆ. ನೀವು ಹೇಳತಕ್ಕ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಪತ್ರಿಕೆಗಳಲ್ಲಿ ಬಂದಿರತಕ್ಕ ವಿಚಾರದಿಂದ ನಿಮಗೆ ಬಹಳ ನೋವು ಉಂಟುಮಾಡಿದೆ ಎಂಬುದನ್ನು ನಾನು ಬಲ್ಲೆ, ಅದರಲ್ಲಿ ನಾನು ಸಹಭಾಗಿಯಾಗಿದ್ದೇನೆ. ನಿಮ್ಮ ಆನಿಸಿಕೆಗೆ ನಾನು ಸಹ ಭಾಗಿಯಾಗಿದ್ದೇನೆ. ಆದ್ದರಿಂದ ನಾನು ರೂಲಿಂಗ್ ಕೊಡುತ್ತೇನೆ

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ನಾನೊಂದು ನೋಟೀಸ್ ಕೊಟ್ಟು ತಮ್ಮ ಅನುಮತಿಯನ್ನು ಕೇಳೀದ್ದೇನೆ. "ಠಾಣೆಯಲ್ಲಿ ಸಾವು" ತುಮಕೂರು ಪೋಲೀಸ್ ಲಾಕ್ ಅಪ್‌ನಲ್ಲಿ ಆದ ಸಾವಿನ ಬಗ್ಗೆ. ತುಮಕೂರಿನ ಠಾಣೆಯಲ್ಲಿ ಸಾವು ಆಗಿದೆ ಎನ್ನತಕ್ಕ ವಿಚಾರ ಪ್ರಜಾಪ್ರಗತಿ ಎನ್ನತಕ್ಕ ಪತ್ರಿಕೆಯಲ್ಲಿ ವರದಿಯಾಗಿದೆ. ತಾವು ಬೇಕಾದರೆ ಇಲ್ಲವೆಂದು ಹೇಳಿ. ನನ್ನ ಹತ್ತಿರ ಕೆಲವರು ಬಂದಿದ್ದರು. ಆಲ್ಲಿ ಏನಾಗಿದೆ ಅಂದರೆ ನರಸಿಂಹರಾಜ ಅಲಿಯಾಸ್ ರಾಜ ಎಂಬುವರನ್ನು ಪೋಲೀಸರು 8ನೇ ತಾರೀಖು ಬಂಧಿಸಿಕರೆತಂದಿಸಿಹೋದರು. 13ನೇ ತಾರೀಖೂ ಆವನನ್ನು ಠಾಣೆಯಲ್ಲಿ ಕ್ರೈಮ್ ರೂಮ್‌ಗೆ ಕರೆದುಕೊಂಡು ಹೋಗಿ ಬರೀ ಸಾವು ಅಷ್ಟೇ ಅಲ್ಲ; ಆಂಧ್ರದ ಪ್ರದೇಶದ ಒಂದು ವ್ಯಾಪ್ತಿಯಲ್ಲಿ ತೆಗೆದುಕೊಂಡು ಹೋಗಿ ಈ ಶವವನ್ನು ಸುಟ್ಟಿದ್ದಾರೆಂದು ಅಲ್ಲಿ ಸಾಕಷ್ಟು ಪ್ರಚಾರವಾಗಿದೆ. ತಾವೇ ಹೇಳುವುದಾದರೆ, ನಾನು ವಿವರಕ್ಕೆ ಹೋಗುವುದಿಲ್ಲ. ಈ ಸುದ್ದಿ ನಿಜವೆ? ಈ ಸುದ್ದಿ ನಿಜವೇ ಹಾಗಿದ್ದರೆ ಪೋಲೀಸ್ ಇಲಾಖೆಯವರು ಏನು ಮಾಡುತ್ತಾರೆ? ಅಧಿಕಾರಿಗಳು ಏನು ಮಾಡುತ್ತಾ ಇದ್ದಾರೆ? ಪತ್ರಿಕೆಯಲ್ಲಿ ಕೂಡ ಬರದಹಾಗೆ ಅದನ್ನು ತಡೆಹಿಡಿಟ್ಟಿದ್ದಾರೆಂದು ನಿನ್ನೆ ದಿವಸ ಈ ದಿವಸ ಬಂದಿದ್ದ ಸಾರ್ವಜನಿಕರು ಹೇಳಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ 8ನೇ ತಾರೀಖೂ ತಿಲಕ್‌ನಗರದ ಪೋಲೀಸ್‌ನವರು ನರಸಿಂಹರಾಜ್‌ನನ್ನು ಬಂಧಿಸಿದರು. ಆವನು 10-11ನೇ ತಾರೀಖುವರೆಗೆ ಕಾಣದೇ ಇರುವುದನ್ನು ನೋಡಿ ಜುಲೈ 11ನೇ ತಾರೀಖು ಆವರ ಸೋದರ ಆಳಿಯ ಸಿ.ಜೆ.ಎಂ. ನ್ಯಾಯಾಲಯಕ್ಕೆ ಹುಡುಕಿಕೊಂಡು ಅರ್ಜಿ ಹಾಕುತ್ತಾರೆ. ಆದರೆ ಆತನನ್ನು ಹಿಡಿದುಕೊಂಡು ಹೋಗಿಲ್ಲವೆಂದು ಪೋಲೀಸ್‌ನವರಿಗೆ ಹೇಳುತ್ತಾರೆ. ಇದು ಆದಮೇಲೆ ಆವನ ಸೋದರಮಾವ 8ನೇ ತಾರೀಖು ಪೋಲೀಸ್‌ನವರು ಆವನನ್ನು ಸೈಕಲ್ ಮೇಲೆ ಕೂರಿಸಿಕೊಂಡು ಕರೆದುಕೊಂಡು ಹೋಗುತ್ತಿದ್ದುದನ್ನು ನೋಡಿದ್ದನ್ನು ಹೇಳಿದ್ದಾರೆ. ಹೀಗಾಗಿ ಪೋಲೀಸ್ ಇಲಾಖೆಯವರು ಕರೆದುಕೊಂಡು ಹೋಗುತ್ತಿದ್ದುದನ್ನು ನೇರ ಪತ್ತಿರದ ಸಂಬಂಧಿಕರು ದೂರು ಕೊಟ್ಟಿರುವುದರ ಜೊತೆಗೆ ನ್ಯಾಯಾಲಯದಲ್ಲಿ ಕೂಡ ಆದರ ಮೊಕದ್ದಮೆಯನ್ನು ಹಾಕಿ